The Timber business at the above place was started about 50 years back and now it is found to be in the Centre of the City which has developed in all respects like trade, population etc., In order to avoid congestion within the thickly populated area of the City, a Layout has been formed on the Mysore Road for Providing Accommodation to these Timber Yard Merchants.

**ಶ್ರೀ ಟಿ. ಆರ್. ಶಾಮಣ್ಣ (ಕೋಟೆ).**—ಮಾನ್ಯ ಅಧ್ಯಕ್ಷರೇ, ಮರಮುಟ್ಟುಗಳ ವ್ಯಾಪಾರವನ್ನು ಬೆಂಗಳೂರು ನಗರದ ಹೊರಗಡೆ ಹಾಕಬೇಕೆಂಬ ವಿಚಾರ ಕಳೆದ 50 ವರ್ಷಗಳಿಂದಲೂ ನಗರ ಸಭೆಯ ಮುಂದೆ ಇದೆ. ಆದರೆ ಪ್ರಭಾವವುಳ್ಳವರಲ್ಲಿ ಕೆಲವರು ಇದನ್ನು ಬೇರೆ ಕಡೆಗೆ ಬದಲಾವಣೆ ಮಾಡುವುದಕ್ಕೆ ತಡೆಗಟ್ಟುವುದಕ್ಕೆ ಮುಖ್ಯ ಕಾರಣವೇನೆಂದರೆ, ಖಾಸಗೀ ಜಾಗದಲ್ಲಿ ಇರತಕ್ಕ ಟಿಂಬರ್ ಯಾರ್ಡ್ ಉಳಿದುಕೊಳ್ಳುವುದಕ್ಕೆ ಅನುಕೂಲವಾಗಲಿ ಮತ್ತು ಕಾರ್ಪೊರೇಷನ್ ಜಾಗದಲ್ಲಿರತಕ್ಕವನ್ನು ಬಲಾತ್ಕಾರವಾಗಿ ದೂರ ಕಳುಹಿಸಲಿ ಎಂಬುದೇ ಆಗಿದೆ. ಇದರಿಂದ ಪಟ್ಟಣದೊಳಗೆ ಇರತಕ್ಕವರಿಗೆ ಒಳ್ಳೆಯ ವ್ಯಾಪಾರವಾಗುತ್ತದೆ. ಊರ ಹೊರಗಡೆ ಇರುವವರಿಗೆ ಸರಿಯಾದ ವ್ಯಾಪಾರವಾಗುವುದಿಲ್ಲ. ಈಗ ನಾನು ಹೇಳಿದ ಜಾಗ ಸ್ವಲ್ಪ ದೂರದಲ್ಲಿರುವುದರಿಂದ ಎಲ್ಲಾ ಹೋಲ್ ಸೇಲ್ ಡೀಲರ್ಸ್‌ನ್ನು ಈಗಿನ ಟಿಂಬರ್ ಯಾರ್ಡ್‌ನಿಂದ ಹೊರಗಡೆ ಕಳುಹಿಸುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಅಲ್ಲಿ ಬಹಳ ವಿಶಾಲವಾದ ಜಾಗ ಇರುವುದರಿಂದ ಮತ್ತು ಸಾರ್ವಜನಿಕರಿಗೆ ಅಲ್ಲಿ ಮನೆಗಳನ್ನು ಕಟ್ಟಿಕೊಡುವುದಕ್ಕೆ ಹೆಚ್ಚಿಗೆ ಅನುಕೂಲವಿರುವುದರಿಂದ ಇದರ ಬಗ್ಗೆ ತೀವ್ರ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ?

**ಶ್ರೀ ಡಿ. ಕೆ. ನಾಯ್ಕರ್.**—ಮಾನ್ಯ ಸದಸ್ಯರಾದ ಶ್ರೀ ಮಾನ್ ಶಾಮಣ್ಣನವರು ಹೇಳಿದಂತೆ ಒಂದು ರೀತಿಯ ಇನ್‌ಫ್ಲುಯೆನ್ಸ್‌ನಿಂದ ಇಲ್ಲಿಯವರೆಗೂ ಈ ಟಿಂಬರ್ ಯಾರ್ಡ್‌ನ್ನು ಬದಲಾವಣೆ ಮಾಡಲು ತಕ್ಕ ಸಂದರ್ಭ ಒರಲಿಲ್ಲವೆಂಬುದನ್ನು ಅವರೂ ಸಹ ಒಪ್ಪಿಕೊಂಡಿದ್ದಾರೆ. ಈಗ ಅದನ್ನು ಶಿಫ್ಟ್ ಮಾಡಬೇಕೆಂದು ಅನೇಕ ಮನವಿಗಳು ಬಂದಿರುವುದನ್ನು ಅವರೂ ಸಹ ಕಂಡಿದ್ದಾರೆ. ಅದೇ ತರಹ ಇನ್‌ಫ್ಲುಯೆನ್ಸ್ ಮಾನ್ಯ ಶ್ರೀ ಶಾಮಣ್ಣನವರಿಗೂ ಬಂದಿದೆಯೆಂದು ನನಗೆ ಕಾಣುತ್ತದೆ. ಅದಕ್ಕೋಸ್ಕರವೇ ಅವರು ಈಗ ಇದರ ಬಗ್ಗೆ ಇಲ್ಲಿ ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದಾರೆಂದು ನನಗೆ ತೋರುತ್ತದೆ. ಆದ್ದರಿಂದ ಸರ್ಕಾರದವರು ಅಲ್ಲಿರುವವರೆಲ್ಲರನೂ ಯಾವಾಗ ಹೊರಗಡೆಗೆ ಹಾಕಬೇಕೆಂದು ತೀರ್ಮಾನ ಕೈಗೊಳ್ಳುತ್ತಾರೋ ಆಗ ಅವರೆಲ್ಲರನ್ನೂ ಹೊರಗಡೆಗೆ ಹಾಕುತ್ತೇನೆಂದು ಭರವಸೆ ಕೊಡುತ್ತೇನೆ.

## 3. LEGISLATIVE BUSINESS

### Karnataka Sales Tax fourth Amendment Bill 1975,

*Motion to consider*

SRI M. Y. GHORPADE.—I move

"That the Karnataka Sales Tax (Fourth Amendment) Bill, 1975 be taken into consideration"

MADAM SPEKER.—Motion moved—

"That the Karnataka Sales Tax (Fourth Amendment) Bill, 1975 be taken into cosideration."

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯಲ್ಲಿ ಎರಡು ಅಡಕವಾಗಿವೆ. ಮೊದಲನೆಯದಾಗಿ ಡಿಕ್ಲೇರ್ಡ್ ಗುಡ್ಸ್ ಮೇಲೆ ಈಗ ಹಾಕಿರತಕ್ಕ ಶೇಕಡ 3ರಷ್ಟು ತೆರಿಗೆಯನ್ನು ಶೇಕಡ 4ರಷ್ಟಕ್ಕೆ ಏರಿಸಬೇಕೆಂಬುದೇ. ಮಾನ್ಯ ಸದಸ್ಯರಿಗೆ ಈಗಾಗಲೇ ಗೊತ್ತಿರುವ ಹಾಗೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಆಕ್ಟ್‌ಗೆ ಅದು ಅನ್ವಯಿಸುತ್ತದೆ. ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಅವಕ್ಕೆ ಶೇಕಡ 3ರಿಂದ 4ರಷ್ಟಂತೆ ಇತ್ತೀಚೆಗೆ ಜಾಸ್ತಿಮಾಡಿದ್ದಾರೆ. ಆದ್ದರಿಂದ ನಾವೂ ಕೂಡ ಡಿಕ್ಲೇರ್ಡ್ ಗುಡ್ಸ್ ಮೇಲೆ ಹಾಕತಕ್ಕ ತೆರಿಗೆಯನ್ನು ಶೇಕಡ 4ಕ್ಕೆ ಏರಿಸಬೇಕಾಗಿದೆ. ಅದಕ್ಕಾಗಿ ಕೆಲವು ನಿಬಂಧನೆಗಳಿವೆ. ಆದರೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಅವುಗಳ ಮೇಲೆ ಎಷ್ಟಿದೆಯೋ ಅದಕ್ಕಿಂತ ಹೆಚ್ಚಿಗೆ ನಾವು ತೆರಿಗೆಯನ್ನು ಹಾಕಲಿಕ್ಕೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ನಮಗೆ ಅಧಿಕಾರವಿಲ್ಲ. ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಎಷ್ಟಿರುತ್ತದೋ ಅಷ್ಟುಮಟ್ಟಿಗೆ ಅವುಗಳ ಮೇಲೆ ತೆರಿಗೆ ಹಾಕುವುದಕ್ಕೆ ಸಾಧ್ಯ. ಡಿಕ್ಲೇರ್ಡ್‌ಗುಡ್ಸ್ ಹಿನ್ನೆಲೆ ನೋಡಿದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿಕೊಂಡು ಹೋಗಿದೆ. ಬಹಳ ಮುಖ್ಯವಾಗಿ ಇರತಕ್ಕ ವಸ್ತುಗಳ ಮೇಲೆ ಹಾಗೂ ಆಹಾರ ಪದಾರ್ಥಗಳ ಮೇಲೆ ನಮ್ಮ ಮನಸ್ಸಿಗೆ ಬಂದಹಾಗೆ ಟಾಕ್ಸ್ ಹಾಕುವುದಕ್ಕೆ ರಾಜ್ಯಮಟ್ಟದಲ್ಲಿ ಅವಕಾಶವಿರಬಾರದೆಂಬ ದೃಷ್ಟಿಯಿಂದ ಕೆಲವಾರು ನಿಬಂಧನೆಗಳನ್ನು ಕಾನ್‌ಸ್ಟಿಟ್ಯೂಷನಿನಲ್ಲಿ ಅಡಕವಾಗಿಟ್ಟಿದ್ದಾರೆ. ಆದರೆ ಇವತ್ತು ಸಿ. ಎಸ್. ಟಿ. ಜಾಸ್ತಿ ಆದಾಗ ನಾವು ಅದಕ್ಕಿಂತಲೂ ಕಡಿಮೆಯಾಗಿ ಡಿಕ್ಲೇರ್ಡ್ ಗುಡ್ಸ್ ಮೇಲೆ ಹಾಕುವುದು ಈ ರಾಜ್ಯದ ಹಿತದೃಷ್ಟಿಯಿಂದ ನಿಜವಾಗಿಯೂ ಹಿತವಲ್ಲ. ಆದ್ದರಿಂದ ಸಿ. ಎಸ್. ಟಿ. ಈಗ ಅವುಗಳ ಮೇಲೆ ಶೇಕಡ 3ರಷ್ಟು ಇರುವುದನ್ನು ಶೇಕಡ 4ರಷ್ಟು ಮಾಡಿರುವುದರಿಂದ ನಾವೂ ಕೂಡ ಆ ರೀತಿಯಾಗಿ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಡಿಕ್ಲೇರ್ಡ್ ಗುಡ್ಸ್ ಅಂದರೆ......

ಶ್ರೀ ಎಂ. ವೈ. ಘೋರ್ಪಡೆ.—ಸ್ಟೀಲ್ ಮುಂತಾದುವು. ಹೀಗೆಯೇ ಇನ್ನೂ 8-10 ಕಮೊಡಿಟೀಸ್ ಇವೆ. ಈ ರೀತಿಯಾಗಿ ಸೇಲ್ಸ್ ಟ್ಯಾಕ್ಸ್ ಜಾಸ್ತಿಮಾಡತಕ್ಕವು. ಯಾವುಯಾವುದು ಎಂಬುದನ್ನು ಆಮೇಲೆ ಹೇಳುತ್ತೇನೆ. ಅದು ಬಹಳ ಮುಖ್ಯವಾದ ಕಮಾಡಿಟೀಸ್ ಆಗಿರುವುದರಿಂದ ಡಿಕ್ಲೇರ್ಡ್‌ಗುಡ್ಸ್ ಪಟ್ಟಿಯಲ್ಲಿರುವ ಹಾಗೆ ಅವೆಲ್ಲಕ್ಕೂ ಸೇಲ್ಸ್ ಟ್ಯಾಕ್ಸ್ ಆಕ್ಟ್‌ನಲ್ಲಿ ಜಾಸ್ತಿ ತೆರಿಗೆ ಹಾಕಬೇಕೆಂದು ಸೇರಿಸಿರುವಾಗ ನಾವು ಅದೇ ರೀತಿಯಲ್ಲಿ ಮಾಡಬೇಕಾಗುತ್ತದೆ. ಆದರೆ ನಾವೇನೂ ಹೊಸದಾಗಿ ಜಾಸ್ತಿ ಟ್ಯಾಕ್ಸ್ ಹಾಕುವುದಕ್ಕೆ ಹೋಗುತ್ತಾ ಇಲ್ಲ. ಇನ್ನು ಪವರ್ ಕ್ರಷರ್ಸ್ ಬಗ್ಗೆ ಈ ಮಸೂದೆಯಲ್ಲಿ ಒಂದು ವಿಚಾರವಿದೆ. ಈ ಪವರ್ ಕ್ರಷರ್‌ಗಳನ್ನು ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಉಪಯೋಗ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಷುಗರ್‌ಕೇನ್ ಜಾಸ್ತಿ ಇದೆಯೋ ಅಲ್ಲಿರತಕ್ಕ ಷುಗರ್ ಫ್ಯಾಕ್ಟರಿಗಳೆಲ್ಲಾ ಅದನ್ನೆಲ್ಲಾ ಉಪಯೋಗ ಮಾಡುತ್ತಾ ಇಲ್ಲ. ಕೆಲವು ಕಡೆಗಳಲ್ಲಿ ಅವನ್ನು ಉಪಯೋಗ ಮಾಡುತ್ತಾರೆ. ಮಂಡ್ಯಾ ಜಿಲ್ಲೆಯಲ್ಲಿ ಅದನ್ನು ಉಪಯೋಗ ಮಾಡುವುದು ವಿಪರೀತ ಇದೆ. ಆದ್ದರಿಂದ ಅವುಗಳ ಮೇಲೆ ಯಾವ ರೀತಿಯಲ್ಲಿ ತೆರಿಗೆ ಹಾಕಬೇಕೆಂಬ ಬಗ್ಗೆ ಈಗಿನ ವಿಧಾನವನ್ನು ಬದಲಾಯಿಸುತ್ತಿದ್ದೇವೆ. ಈಗಿರುವ ಕಾನೂನು ಪ್ರಕಾರ ಷುಗರ್‌ಕೇನ್‌ಗೆಒಂದು ಟನ್ನಿಗೆ 9 ರೂಪಾಯಿಗಳಂತೆ ಪರ್ಚೇಜ್ ಟ್ಯಾಕ್ಸ್ ಕೊಡಬೇಕು, ಇದರಲ್ಲಿ ಬಂದಿರತಕ್ಕ ತೊಂದರೆ, ಇದರಲ್ಲಿ ಸ್ವಲ್ಪ ಟ್ಯಾಕ್ಸ್ ಇವೇಷನ್ ಇದೆ. ಏಕೆಂದರೆ ಜಾಗೆರಿ ಮ್ಯಾನುಫ್ಯಾಕ್ಚರರ್ಸ್ ಏನಿದ್ದಾರೆಯೋ ಅವರು ಗ್ರಾಮಾಂತರ ಪ್ರದೇಶಗಳಗೆ ಹೆಚ್ಚಿಗೆ ಇರುವುದರಿಂದ ರೈತರ ಪರವಾಗಿ ಅವರು ಲೆಕ್ಕಪತ್ರಗಳನ್ನು ಇಡುವುದು ಬಹಳ ಕಷ್ಟವಾಗುತ್ತದೆ. ಅವರು ಕಬ್ಬನ್ನು ಕ್ರಷ್ ಮಾಡಿರತಕ್ಕದ್ದು ಎಷ್ಟು, ಸ್ವತಃ ರೈತರಿಂದ ಅದನ್ನು ಕೊಂಡುಕೊಂಡದ್ದು ಎಷ್ಟು, ಪವರ್ ಕ್ರಷರ್ಸ್ ಲೆಕ್ಕವನ್ನು ಇಡುವುದಕ್ಕೂ ಬಹಳ ತೊಂದರೆಯಾಗುತ್ತಿದೆ. ಒಂದುವೇಳೆ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಅವರು ವಿದ್ಯುಚ್ಛಕ್ತಿಯನ್ನು ಎಷ್ಟು ಉಪಯೋಗ ಮಾಡಿದ್ದಾರೆ, ಬ್ಯಾಂಕಿನಿಂದ ಅವರು ಎಷ್ಟು ಸಾಲ ತೆಗೆದುಕೊಂಡಿದ್ದಾರೆಂಬುದನ್ನು ವಿಚಾರಮಾಡಿ ಆದರ ಬಗ್ಗೆ ಟ್ಯಾಕ್ಸ್ ಹಾಕುವ ಬಗ್ಗೆ ಈಗಿನ ಕಾನೂನು ಮಟ್ಟದಲ್ಲಿ ಅದನ್ನು ಎತ್ತಿ ಹಿಡಿಯುವುದು ಸ್ವಲ್ಪ ಕಷ್ಟವಾಗುತ್ತದೆ. ಇದರಿಂದ ಪವರ್ ಕ್ರಷರ್ಸ್ ಯಾರು ಇದ್ದಾರೋ ಅವರಿಗೂ ಕೂಡ ಬಹಳವಾಗಿ ತೊಂದರೆಯಾಗುತ್ತಿದೆ. ಸರ್ಕಾರಕ್ಕೂ ಕೂಡ ಅದನ್ನು ವಸೂಲು ಮಾಡುವುದಕ್ಕೆ ಬಹಳವಾಗಿ ತೊಂದರೆಯಾಗುತ್ತಿದೆ. ಈ ವಿಚಾರಗಳನ್ನು ಸರ್ಕಾರ ತನ್ನ ಗಮನದಲ್ಲಿಟ್ಟುಕೊಂಡು ಈಗ ತೆರಿಗೆಯನ್ನು ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಹಾಕಿರುವ ಹಾಗೆ ಮಾಡಿದ್ದೇವೆ. ಮೊದಲು ಈ ಪವರ್ ಕ್ರಷರ್ಸ್ ಉಪಯೋಗ ಮಂಡ್ಯಾ ಜಿಲ್ಲೆಯಲ್ಲಿ ಆಯಿತು.

ಶ್ರೀ ಎಂ. ವೈ. ಘೋರ್ಪಡೆ.—ಅದರಿಂದ ಆಗತಕ್ಕಂಥ ತೊಂದರೆಗಳನ್ನು ಅವರು ಸರ್ಕಾರಕ್ಕೆ ತಿಳಿಸಿದರು. ನಮ್ಮ ಅಧಿಕಾರಿಗಳು ಪವರ್ ಕ್ರಶ್ ಇಟ್ಟುಕೊಂಡಿರತಕ್ಕಂಥವರ ಮೇಲೆ ಟ್ಯಾಕ್ಸ್ ಹಾಕುತ್ತಾರೆ. ಅವರು ಕೋರ್ಟಿಗೆ ಹೋಗುತ್ತಾರೆ. ಏತಕ್ಕೆಂದರೆ ಟ್ಯಾಕ್ಸ್ ಜಾಸ್ತಿ ಹಾಕಿದ್ದಾರೆಂದು ಅವರು ಕೋರ್ಟಿಗೆ ಹೋಗುತ್ತಾರೆ. ಕೋರ್ಟಿನಲ್ಲಿ ಅವರು ರೈತರ ಪರವಾಗಿ ನಾವು ಕ್ರಶ್ ಮಾಡಿದ್ದೇವೆಂದು ಹೇಳುತ್ತಾರೆ. ಇಂಥ ಹಲವಾರು ವಿಷಯಗಳು ಬರುತ್ತವೆ. ಇದನ್ನು ತಪ್ಪಿಸುವ ವಿಧಾನ ಹೇಗೆ ಎಂದು ಯೋಚನೆ ಮಾಡಿ. ಈ ಜನಕ್ಕೂ ಕೂಡ ಒಂದು ಕಾಂಪೊಜಿಷನ್ ರೇಟ್ ಮಾಡಿದರೆ ಉತ್ತಮವೆಂದು ಹೇಳಿ ಈ ವಿಚಾರಕ್ಕೆ ಬಂದು ಕಾಂಪೌಂಡಿಂಗ್ ಫೆಸಿಲಿಟೀಸ್‌ನ್ನು ಕೊಟ್ಟಿದ್ದೇವೆ. ಕಾಂಪೌಂಡಿಂಗ್ ಫೆಸಿಲಿಟೀಸ್ ಕೊಡುವ ಉದ್ದೇಶವೇನು ? ಅವರು ಲೆಕ್ಕ ಪತ್ರಗಳು ಇಡಬೇಕಾದುದಿಲ್ಲ. ಹಾಗೂ ನಮ್ಮ ಅಧಿಕಾರಿಗಳು ಕೋರ್ಟಿನ ತೀರ್ಮಾನದ ಪ್ರಕಾರ ಒಂದು ತೀರ್ಮಾನಕ್ಕೆ ಬರುವುದು ಬೇಡವೆಂದು ಈ ತೀರ್ಮಾನ ಮಾಡಿದ್ದೇವೆ. ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ ಹಾರ್ಸ್ ಪವರ್ ಕ್ರಶರ್ ಜಾಸ್ತಿ ಇವೆ. ಆದುದರಿಂದ 10 ಹೆಚ್. ಪಿ. ಕ್ರಶರ್ ಇರತಕ್ಕಂಥವರು 2 ಸಾವಿರ ರೂಪಾಯಿಗಳನ್ನು ಟ್ಯಾಕ್ಸ್ ಆಗಿ ಕೊಟ್ಟು ಬಿಟ್ಟರೆ ಅವರು ಲೆಕ್ಕ ಪತ್ರಗಳನ್ನು ಇಡುವುದು ಬೇಡವೆಂದು ಈ ತೀರ್ಮಾನಕ್ಕೆ ಬಂದಿದ್ದೇವೆ

ಮಂಡ್ಯ ಜಿಲ್ಲೆಯಲ್ಲಿ 20 ಲಕ್ಷ ಟನ್ ಕಬ್ಬು ಇದೆ. ಅದರಲ್ಲಿ ಸುಮಾರು 11 ಲಕ್ಷ ಟನ್ ಷುಗರ್ ಫ್ಯಾಕ್ಟರಿಯವರು ಉಪಯೋಗಿಸುತ್ತಾರೆ. ಇನ್ನು ಉಳಿಯುಕ್ಕಂಥ 8–9 ಲಕ್ಷ ಟನ್ ಕಬ್ಬು ಹಾಗೆಯೇ ಉಳಿಯುತ್ತದೆ. ಅದನ್ನು ಅವರು ಜಾಗರಿ ಮಾಡಬೇಕಾಗುತ್ತದೆ. ಆದುದರಿಂದ ಇಲ್ಲಿ ಬಂದಿರತಕ್ಕಂಥ ತೊಂದರೆ ಏನು ಎಂದರೆ ಹಾಗೆ ಉಳಿದಿರತಕ್ಕಂಥ ಕಬ್ಬನ್ನು ಪವರ್ ಕ್ರಶ್‌ನವರು ಕೊಂಡುಕೊಂಡು ಜಾಗರಿ ಮಾಡುತಾರೋ, ಇಲ್ಲವೋ ಎನ್ನುವುದನ್ನು ಕಂಡುಹಿಡಿಯುವುದು ಬಹಳ ಕಷ್ಟದ ಕೆಲಸ. ಅವರು ಬಾಕಿ ಉಳಿದಿರತಕ್ಕಂಥ ಕಬ್ಬನ್ನು ಬಡ ರೈತರ ವತಿಯಿಂದ ಮಾಡುತ್ತಾರೋ, ಇಲ್ಲ ಸ್ವಂತ ಕೊಂಡುಕೊಂಡು ಕ್ರಶ್ ಮಾಡುತ್ತಾರೋ ಕಂಡು ಹಿಡಿಯುವುದಕ್ಕೆ ಬಹಳ ಕಷ್ಟವಾಗಿದೆ. ನಮ್ಮ ಅಧಿಕಾರಿಗಳು ಇಷ್ಟು ಎಂದು ಟ್ಯಾಕ್ಸ್ ಹಾಕಿದರೆ ಅವರಿಗೆ ಅಸಮಾಧಾನವಾಗಿ ಕೋರ್ಟಿಗೆ ಹೋಗುತ್ತಾರೆ. ಆಗ ಅಲ್ಲಿ ನಮ್ಮ ಅಧಿಕಾರಿಗಳು ಪ್ರೂವ್ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ.ಹೀಗಾಗಿ ನಮ್ಮ ಸರ್ಕಾರಕ್ಕೆ ಬರತಕ್ಕಂಥ ಹಣ ಸರಿಯಾಗಿ ಕಲೆಕ್ಟ್ ಆಗುತ್ತಿಲ್ಲ. ಸರ್ಕಾರಕ್ಕೆ ಬರತಕ್ಕಂಥ ಹಣವೆಲ್ಲಾ ನಷ್ಟವಾಗಿ ಹೋಗುತ್ತಿದೆ. ಟ್ಯಾಕ್ಸ್ ಎವೇಷನ್ ನಡೆಯುತ್ತಿದೆ. ಟ್ಯಾಕ್ಸ್ ಕಲೆಕ್ಟ್ ಮಾಡುವುದರಲ್ಲಿ ಏವೇಷನ್ ಏನಿದೆ, ತೊಂದರೆ ಏನಿದೆ ಅದನ್ನು ನಿವಾರಿಸುವುದಕೋಸ್ಕರ ಇದನ್ನು ತಂದಿದ್ದೇವೆ.ನಿಮಗೆ ಇಷ್ಟು ಆದಾಯಬರುತ್ತದೆ,ಆದುದರಿಂದಇಷ್ಟು ಟ್ಯಾಕ್ಸ್ ಕೊಡಬೇಕು ಎಂದು. ರೈತರು ಸುಲಭ ರೀತಿಯಲ್ಲಿ ಲೆಕ್ಕ ಮಾಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಇದನ್ನು ತಂದಿದ್ದೇವೆ. ಯಾರು ಪವರ್ ಕ್ರಶ್‌ಗಳನ್ನಿಟ್ಟಿದ್ದಾರೆ ಅವರಿಗೆ ನಾವು ವಿಶೇಷವಾಗಿ ಉಪಕಾರವನ್ನು ಮಾಡುವುದಕ್ಕೆ ಹೊರಟ್ಟಿದ್ದೇವೆಂದು ಯಾರೂ ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಶುಗರ್ ಫಾಕ್ಟರಿಯವರು ಏನು ಟ್ಯಾಕ್ಸ್ ಕೊಡುತ್ತಿದ್ದಾರೆ ?

ಶ್ರೀ ಎಂ. ವೈ. ಘೋರ್ಪಡೆ.—ಒಂದು ಟನ್ನಿಗೆ 16 ರೂಪಾಯಿಗಳ ಹಾಗೆ ಕೊಡುತ್ತಿದ್ದಾರೆ

ಮಾನ್ಯ ಅಧ್ಯಕ್ಷರೇ, ಪುನಃ ಹೇಳುವುದಾದರೆ 2 ವಿಷಯಗಳು ಮಾತ್ರ ಈ ತಿದ್ದುಪಡಿಯಲ್ಲಿ ಅಡಕವಾಗಿದೆ. ಡಿಕ್ಲೇರ್ಡ್ ಗೂಡ್ಸ್ ಮೇಲೆ 3 ರಿಂದ 4 ಪರ್ಸೆಂಟ್‌ಗೆ ಟ್ಯಾಕ್ಸನ್ನು ಹೆಚ್ಚಿಸಿದ್ದೇವೆ. ಎರಡನೆಯದಾಗಿ ಪವರ್ ಕ್ರಶರ್ ಇಟ್ಟುಕೊಂಡಿರುವವರಿಗೆ ಕಾಂಪೌಂಡಿಗ್ ಫೆಸಿಲಿಟೀಸ್‌ನ್ನು ಕೊಟ್ಟಿದ್ದೇವೆ. ಆದುದರಿಂದ ಇದು ಒಂದು ಸುಲಭವಾದಂಥ ಬಿಲ್ಲು ಇದರ ಬಗ್ಗೆ ಚರ್ಚೆ ಮಾಡಬೇಕಾದ ಅವಶ್ಯಕತೆ ಇಲ್ಲ. ಇದಕ್ಕೆ ಮಾನ್ಯ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾವು ಇದರ ಮೇಲೆ ಚರ್ಚೆ ಮಾಡುವುದಕ್ಕೂ ಮೊದಲು ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಈಗಿರತಕ್ಕಂಥ ಕಾನೂನಿನ ಪ್ರಕಾರ ಸರ್ಕಾರಕ್ಕೆ ಎಷ್ಟು ಉತ್ಪನ್ನ ಬರುತ್ತಿದೆ ? ಯಾವ ಆಧಾರದ ಮೇಲೆ ? ಹಾಗೂ ತಾವು ಕಾನೂನು ಮಾಡತಕ್ಕಂಥದರಿಂದ ಎಷ್ಟು ಉತ್ಪನ್ನ ಸರ್ಕಾರಕ್ಕೆ ಬರುತ್ತದೆ ಎಂಬುದನ್ನುದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಈಗ ಇಲಸ್ಟ್ರೇಷನ್ ಕೊಡುವುದೇನೆಂದರೆ, ಇದರಲ್ಲಿ ಅವರು ತಮ್ಮ ಪರವಾಗಿ ಎಷ್ಟು ಕಬ್ಬನ್ನು ಕೊಂಡು ಕೊಂಡಿದ್ದಾರೆ ಹಾಗೂ ರೈತರ ಪರವಾಗಿ ಎಷ್ಟು ಕಬ್ಬನ್ನು ಕೊಂಡುಕೊಂಡಿದ್ದಾರೆ ಎಂದು ಕಂಡು ಹಿಡಿಯಬೇಕಾದರೆ ಬಹಳ ಕಷ್ಟವಾಗಿದೆ. ಮಂಡ್ಯ ಜಿಲ್ಲೆಯಲ್ಲಿರತಕ್ಕಂಥ ಪವರ್ ಕ್ರಶ್‌ಗಳ ಅಂಕಿಸಂಖ್ಯೆಗಳನ್ನು ನಿಮಗೆ ಕೊಡುವುದಾದರೆ ಅಲ್ಲಿ ಸುಮಾರು 860 ಪವರ್ ಕ್ರಶರ್‌ಗಳಿವೆ. ಅದರಲ್ಲಿ ಸುಮಾರು 682–10 ಎಚ್. ಪಿ. ಕ್ರಶರ್‌ಗಳಿವೆ. ಈಗ ನಾನು ಆಗಲೇ ಹೇಳಿದ ಹಾಗೆ ಮಂಡ್ಯ ಜಿಲ್ಲೆಯಲ್ಲಿ 20 ಲಕ್ಷ ಟನ್ ಕಬ್ಬಿನ ಪೈಕಿ 11 ಲಕ್ಷ ಟನ್ ಶುಗರ್ ಫ್ಯಾಕ್ಟರಿಯವರು ಕ್ರಶ್ ಮಾಡುತ್ತಾರೆ. ಬಾಕಿ ಉಳಿದಿರತಕ್ಕಂಥ 9 ಲಕ್ಷ ಟನ್ ಕಬ್ಬನ್ನು ಅವರು ಸ್ವಂತ ಕೊಂಡು ಕೊಂಡು ಕ್ರಶ್ ಮಾಡುತ್ತಾರೋ ಇಲ್ಲವೇ ರೈತರ ಪರವಾಗಿ ಕ್ರಶ್ ಮಾಡಿ ಕೊಡುತ್ತಾರೋ ಎಂದು ಕಂಡು ಹಿಡಿಯುವುದು ಬಹಳ ಕಷ್ಟವಾಗುತ್ತಿದೆ. ಹಾಗೂ ನಿಮಗೆ ಇನ್ನೊಂದು ವಿಷಯವನ್ನು ತಿಳಿಸುವುದಾದರೆ, ಆವರೇಜ್ ಕ್ರಶಿಂಗ್‌ನ್ನು ಕಲೆಕ್ಟ್ ಮಾಡಿದ್ದೇವೆ. ಒಂದು ವರ್ಷಕ್ಕೆ 180 ದಿನಗಳ ವರ್ಕ್, ದಿನಕ್ಕೆ ಆರು ಟನ್ನಿನಂತೆ ಒಂದು ಮಾಡುತ್ತೇವೆಂದು ಲೆಕ್ಕ ಇಟ್ಟುಕೊಂಡರೆ 750 ಟನ್ ಪವರ್ ಕ್ರಶ್ ಮಾಡಿದಂತಾಯಿತು. ಆಮೇಲೆ 1 ಟನ್ನಿಗೆ 120 ರೂಪಾಯಿಗಳೆಂದು ಲೆಕ್ಕ ಹಾಕಿದರೂ ಕೂಡ 90 ಲಕ್ಷ ಟನ್‌ಟರ್ನ್ ಓವರ್ ಆಗುತ್ತದೆಂದು ಇಟ್ಟುಕೊಳ್ಳಬಹುದು. ಆದುದರಿಂದ ಪವರ್ ಕ್ರಶ್ ಇಟ್ಟುಕೊಂಡಿರತಕ್ಕಂಥ ಜನ ಟ್ಯಾಕ್ಸನ್ನು ಕೊಡಲೇಬೇಕು ಎಂದು ಆಯಿತು.

SRI KAGODU THIMMAPPA.—The intention of the legislation is to reduce the burden of the taxation or to increase the taxation ?

SRI M. Y. GHORPADE.—The intention is to collect something. ಈಗ ನೋಡಿರಿ, 10 ಎಚ್. ಪಿ, ಕ್ರಶರ್ ಇರತಕ್ಕಂಥವರಿಗೆ Per Annam 2,000 ರೂಪಾಯಿಗಳಂತೆ ಟ್ಯಾಕ್ಸ್ ಹಾಕಿದರೆ ಎಷ್ಟು ಆಯಿತು ? ಅಲ್ಲಿ ಸುಮಾರು 800 ಯೂನಿಟ್ಸ್‌ಗಳಿವೆ ಎಂದು ಇಟ್ಟುಕೊಂಡರೆ 14–15 ಲಕ್ಷ ರೂಪಾಯಿಗಳ ಟ್ಯಾಕ್ಸ್ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಎಷ್ಟು ಟ್ಯಾಕ್ಸ್ ಬರುತ್ತಿತ್ತು ?

ಶ್ರೀ ಎಂ. ವೈ. ಘೋರ್ಪಡೆ–ಏನೂ ಬರುತ್ತಿರಲಿಲ್ಲ. ಬಹಳ ಕಡಿಮೆ ಟ್ಯಾಕ್ಸ್ ಬರುತ್ತಿತ್ತು. ಅವರು ಸರಿಯಾಗಿ ಟ್ಯಾಕ್ಸ್ ಕೊಡುತ್ತಾ ಇರಲಿಲ್ಲ. ವಾದವಿವಾದಗಳಾಗಿ ಅವರು ಕೋರ್ಟಿಗೆ ಹೋಗಿ ಬಿಡುತ್ತಿದ್ದರು. ಬರೀ ಒಂದು ಕಂಪ್ಲೇಟ್ ಬರುತ್ತಿತ್ತೇ ವಿನಹಃ ಟ್ಯಾಕ್ಸ್ ಬರುತ್ತಾ ಇರಲಿಲ್ಲ. ಈಗ ಈ ವಿಧಾನದ ಪ್ರಕಾರ ಸುಮಾರು 15–16 ಲಕ್ಷ ರೂಪಾಯಿ ಟ್ಯಾಕ್ಸ್ ವಸೂಲಿಯಾಗುತ್ತದೆ. ಈ ರೀತಿ ಕಾಂಪೌಂಡಿಂಗ್ ಫೆಸಿಲಿಟೀಸ್‌ನಿಂದ 15–16 ಲಕ್ಷ ರೂಪಾಯಿಗಳನ್ನಾದರೂ ವಸೂಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದೇ ಇದರಲ್ಲಿರತಕ್ಕಂಥ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ.—ತಾವು ಇದು ಬರೀ ಮಂಡ್ಯ ಡಿಸ್ಟ್ರಿಕ್ಟ್ ಒಂದಕ್ಕೆ ಅನ್ವಯಿಸುತ್ತದೆಂದು ಹೇಳಿದರೋ ಅಥವಾ ಎಲ್ಲಾ ಕಡೆಗೂ ಇದು ಅನ್ವಯಿಸುತ್ತದೆಯೋ ?

ಶ್ರೀ ಎಂ. ವೈ. ಘೋರ್ಪಡೆ.—ಬೇರೆ ಕಡೆ ಕೂಡ ಇದೆ ಮುಖ್ಯವಾಗಿರತಕ್ಕಂಥದ್ದು ಮಂಡ್ಯ ಜಿಲ್ಲೆಯಲ್ಲಿ.

2–30 P.M.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರೆ. ಈಗ ಮಂಡ್ಯ ಜಿಲ್ಲೆಯಲ್ಲಿ 860 ಪವರ್ ಕ್ರಷರ್ಸ್ ಒಟ್ಟು ಇದೆ ಎನ್ನತಕ್ಕದ್ದಾದರೆ ಅದರಲ್ಲಿ 10 ಹೆಚ್.ಪಿ. 682 ಎಂದು ತಿಳಿಸಿದರೆ, ಈಗ ತಮ್ಮ ಇಲಾಖೆಯವರು ಲೆಕ್ಕ ಮಾಡಿ ಕೊಟ್ಟಿರುವ ಪ್ರಕಾರ 682 10 ಹೆಚ್.ಪಿ. ಏನು ಇದೆ ಇದಕ್ಕೆ ನಾವು ಪಾಸ್ ಮಾಡಬೇಕಾಗಿದೆ. ಈಗ ಹಾಕತಕ್ಕ ರೇಟ್ ಪ್ರಕಾರ ಎಷ್ಟು ಹಣವಾಗುತ್ತದೆ; ಹಿಂದೆ ಎಷ್ಟು ಹಣ ಬರುತ್ತಾ ಇರಲಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು

ಶ್ರೀ ಎಂ. ವೈ. ಘೋರ್ಪಡೆ.— ಅದು ಬಹಳ ಕಡಿಮೆ ಬಂದಿದೆ ಎಂದು ಹೇಳಿದೆ. ಆದರೆ ಈಗ ಇಷ್ಟು ಮಾತ್ರ ಹೇಳಬಲ್ಲೆ. ಈಗ 14 ಲಕ್ಷ ರೂಪಾಯಿ ಏನು ನಿರೀಕ್ಷೆ ಮಾಡುತ್ತಿದ್ದೇವೆ ಅಷ್ಟು ಬಂದಿಲ್ಲ, ಇದನ್ನು ವಸೂಲು ಮಾಡುವುದೇ ಕಷ್ಟವಾಗಿದೆ. ಏತಕ್ಕೆಂದರೆ ಪ್ರತಿಯೊಂದು ಕೋರ್ಟಿನಲ್ಲಿ ಇದೆ. ಆದುದರಿಂದ ಏನು ಹಣ ಬರುತ್ತಾ ಇಲ್ಲ, ಇದರಲ್ಲಿ ಲಿಟಿಗೇಷನ್ ಇದೆ. ಈಗ

ಸುಮಾರು 14-15 ಲಕ್ಷ ರೂಪಾಯಿಯಾದರೂ ಇದರಿಂದ ಬರಬೇಕು ಎನ್ನುವುದೇ ನಮ್ಮ ಉದ್ದೇಶ. ನಾನು ಮೊದಲೇ ಹೇಳಿದ ಹಾಗೆ 9 ಲಕ್ಷದ ಭಾಗ ಇತರಕ್ಕೆ ಷುಗರ್ ಫ್ಯಾಕ್ಟರಿ ಕ್ರಶ್ ಆಗುತ್ತಾ ಇಲ್ಲ. ಅದು ಪವರ್ ಕ್ರಷ್ ಆಗುತ್ತದೆ ಎಂದು ಲೆಕ್ಕ ಹಾಕಿದರೆ ಆಗ ಜಾಸ್ತಿಯಾಗುತ್ತದೆ. ಈಗ 9 ಲಕ್ಷ ಇದ್ದರೆ ಅದರಲ್ಲಿ ಅರ್ಧಭಾಗ ಕ್ರಷ್ ಮಾಡದೇ ಇರಬಹುದು ಎಂದು ಇಟ್ಟುಕೊಂಡರೆ ಅಂಕಿ ಸಂಖ್ಯೆ ಸಿಕ್ಕುತ್ತದೆಯೇ? ಈಗ ಪರಿಸ್ಥಿತಿ ಏನೆಂದರೆ ನಾವು ಏನೂ ವಸೂಲು ಮಾಡುವುದಕ್ಕಾಗುತ್ತಿಲ್ಲ. ಈ ಕಾಂಪೌಂಡಿಗೆ ಫೆಸಿಲಿಟೀಸ್ ರೀತಿ ಮಾಡಿದರೆ 14-15 ಲಕ್ಷ ರೂಪಾಯಿ ತೆಗೆದುಕೊಂಡ ಹಾಗೆ ಆಗುತ್ತದೆ. ಇನ್ನೊಂದು ವಿಷಯ ಸೇಲ್ಸ್ ಟ್ಯಾಕ್ಸ್ ಬಗ್ಗೆ ಹೇಳಬೇಕು ಎಂದರೆ, ಈ ಸೇಲ್ಸ್ ಟ್ಯಾಕ್ಸ್ ಅನ್ನ ತಕ್ಕದ್ದು ಹೊಸದೇನು ಅಲ್ಲ, 3 ರಿಂದ 4 ಪರ್‌ಸೆಂಟ್‌ವರೆಗೆ ಮಾಡಬೇಕು ಎಂದು ಇದೆ, ಅದಕ್ಕನುಗುಣವಾಗಿ ಕೆಲವು ಅಮೆಂಡ್‌ಮೆಂಟ್ಸ್ ಬಿಲ್ಲಿನಲ್ಲಿದೆ. ಅದಕ್ಕೆ ಜಾಸ್ತಿ ಇರಬಾರದು ಎಂದು ಇದೆ. ಯಾರದೂ 10 ಲಕ್ಷಕ್ಕೂ ಹೆಚ್ಚು ಜಾಸ್ತಿ ಟರ್ನ್‌ಓವರ್ ಆಗುತ್ತದೆ ಅವರಿಗೆ 10 ಪರ್‌ಸೆಂಟ್ ಆಫ್ ದಿ ಟ್ಯಾಕ್ಸ್ ಹಾಕಬೇಕೆಂದೂ ಇದೆ. ಅಲ್ಲದೇ 4 ಪರ್‌ಸೆಂಟ್ ಹಾಕಬೇಕೆಂದು ಏನು ತೀರ್ಮಾನ ಇದೆ, ಅದನ್ನು ಈ ಸಭೆ ಒಪ್ಪಿಕೊಂಡಿದೆ. ಅದಕ್ಕನುಗುಣವಾಗಿ ಕೆಲವು ವ್ಯಾಪಾರ ದುಗಳನ್ನು ಮಾತ್ರ ಮಾಡುತ್ತಿದ್ದೇವೆ. ಇದರಲ್ಲಿ ಮುಖ್ಯ ಉದ್ದೇಶ ಏನು ಎಂದರೆ ನಾಲ್ಕು ಪರ್‌ಸೆಂಟ್ ವಸೂಲು ಮಾಡುವುದರಲ್ಲಿ ಏನು ತೊಂದರೆಯಿಲ್ಲ. ಈ ದೃಷ್ಟಿಯಿಂದ 6(ಬಿ) ಮಾಡಿಫೈ ಮಾಡುತ್ತಿದ್ದೇವೆ. ಅಲ್ಲದೇ ಈ ಪವರ್ ಕ್ರಷರ್ಸ್ ಒಂದು ವಿಷಯ, ಈ ಎರಡು ವಿಷಯಗಳು ಮಾತ್ರ ಈ ಬಿಲ್ಲಿನಲ್ಲಿ ಇದೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಅಧ್ಯಕ್ಷರೇ, ಈಗ ನಮ್ಮ ಅರ್ಥಸಚಿವರನ್ನು ಅಭಿನಂದಿಸಬೇಕಾಗಿದೆ, ಏಕೆಂದರೆ ಇವರು ನಾನಾ ಕ್ರಮಗಳನ್ನು ಅನುಸರಿಸಿ ಇವರು ಅಧಿಕಾರ ತೆಗೆದುಕೊಂಡಮೇಲೆ 40 ಕೋಟಿ ರೂಪಾಯಿ ಇದ್ದುದಕ್ಕೆ ಮತ್ತೆ 1 ಕೋಟಿ 20 ಲಕ್ಷ ರೂಪಾಯಿ ಹೆಚ್ಚಿಸಿದ್ದಾರೆ. ಹೇಳುವಾಗ ಸ್ವಲ್ಪ ಡೋಸೇಜ್ ಎಂದು ಹೇಳಿದರು ವಿಪರೀತ ಟ್ಯಾಕ್ಸ್ ಹಾಕಿ ನಾಲ್ಕು ವರ್ಷದ ಅವಧಿಯಲ್ಲಿ ಸುಮಾರು 50—60 ಕೋಟಿ ರೂಪಾಯಿ ಸೇಲ್ಸ್‌ಟ್ಯಾಕ್ಸ್ ಜನರ ಮೇಲೆ ಭಾರ ಹಾಕಿರುವುದು ಅಂಕಿ ಅಂಶ ನೋಡಿದರೆ ಗೊತ್ತಾಗುತ್ತದೆ. ಈಗ ಮೊದಲನೆಯದಾಗಿ ಹೇಳುವುದಾದರೆ ಕೇಂದ್ರ ಸರ್ಕಾರದವರು ಮೂರು ಪರ್‌ಸೆಂಟ್ ಇದ್ದುದನ್ನು ನಾಲ್ಕು ಪರ್‌ಸೆಂಟ್ ಮಾಡಿದಾಗ ನಾವು ಮೂರು ಪರ್‌ಸೆಂಟ್ ಎಂದು ಇಟ್ಟುಕೊಳ್ಳುವುದು ಸರಿಯಲ್ಲ ಎಂದು ಹೇಳಿದರು. ಈಗ ಕೇಂದ್ರ ಸರ್ಕಾರದಲ್ಲಿ ಹೆಚ್ಚಾಗಿದೆ, ಕಡಿಮೆ ಮಾಡುವ ಪ್ರಸಂಗ ಯಾವೊತ್ತೂ ಒದಗಿರಲಿಲ್ಲ. ಆದರೆ ನಾವು ಹೆಚ್ಚು ಮಾಡಬಾರದು ಎಂದು ಹೇಳಿದ್ದು ಅನೇಕ ಸಂದರ್ಭದಲ್ಲಿ ಇದೆ. ಈ ರೀತಿ ತೆರಿಗೆ ಹೆಚ್ಚಿಸಬೇಕಾದರೆ ಸಭೆಯ ಮುಂದೆ ಅಂಕಿಅಂಶ ಇಡಬೇಕಾಗುತ್ತದೆ, ಏಕೆಂದರೆ ಈ ರೀತಿ ಇಡುವುದರಿಂದ ಹಿಂದೆ ಎಷ್ಟು ಹಣ ಬರುತ್ತಿತ್ತು, ಈಗ ಹೊಸ ತೆರಿಗೆ ಹಾಕುವುದರಿಂದ ಎಷ್ಟು ಹಣ ಬರುತ್ತದೆ, ಎಂದು ಅರ್ಥವಾಗುತ್ತದೆ, ಅಲ್ಲದೇ ಈ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲು ಒಂದು ವರ್ಷಕ್ಕೆ ಮೂರು ಸಾರಿ ಬರುತ್ತದೆ. ಪ್ರತಿ ವರ್ಷ ಒಂದು ಬಿಲ್ಲು ಬಂದಾಗಲೆಲ್ಲಾ ತೆರಿಗೆ ಹೆಚ್ಚಿಸುತ್ತಿರುತ್ತೀರಿ, ಇದರಿಂದ ಜನಸಾಮಾನ್ಯರಿಗೆ ಹೊರೆಯಾಗುತ್ತದೆ ಎನ್ನುವುದನ್ನು ಗಮನದಲ್ಲಿ ಟ್ಟುಕೊಂಡಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈಗ ಹೊಸ ಪದ್ಧತಿ ಪ್ರಕಾರ ಕಾಂಪೌಂಡಿಂಗ್ ಸಿಸ್ಟಂ ಎಂದು ತಂದಿದ್ದಾರೆ, ಇದು ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಈ ಕಾಂಪೌಂಡಿಂಗ್ ಸಿಸ್ಟಂ ಇದೆ. ಈಗ ಈ ಒಂದು ಡಿಸ್ಕ್ರಿಷನರಿ ಪವರ್‌ನ್ನು ಅಧಿಕಾರಿಗಳಿಗೆ ಕೊಟ್ಟರೆ ಖಂಡಿತವಾಗಿ ಇದನ್ನು ವಿಶೇಷವಾಗಿ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಾರೆ, ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಆದರ ಜೊತೆಗೆ ಈ ಒಂದು ಹೆಚ್.ಪಿ. ಕ್ರಷರ್ಸ್ ಮೇಲೆ ಹಾಕಿದರೆ ಎಷ್ಟು ಕ್ರಷ್ ಮಾಡಿದರು ಎಂದು ಲೆಕ್ಕ ಸಿಕ್ಕುವುದಿಲ್ಲ. ಈಗ ಹಗಲೂ ರಾತ್ರಿ ಕೆಲಸ ಮಾಡಿದರೆ ಅವರಿಗೂ ಒಂದೇ ಟ್ಯಾಕ್ಸ್, ಮತ್ತೆ ಬರೀ ಹಗಲಿನಲ್ಲಿ ಕೆಲಸ ಮಾಡಿದವರಿಗೂ ಒಂದೇ ರೀತಿಯಾದ ಟ್ಯಾಕ್ಸ್ ಬೀಳುತ್ತದೆ ಎಂದು ಹೇಳುತ್ತೇನೆ. ಈಗ ತಾವು ಈ ರೀತಿ ಒಂದು ಅವಕಾಶಗಳನ್ನು ಅಧಿಕಾರಿಗಳಿಗೆ ಒದಗಿಸಿಕೊಟ್ಟರೆ ಇದರಿಂದ ಖಂಡಿತವಾಗಿ ದುರುಪಯೋಗ ಜಾಸ್ತಿಯಾಗುತ್ತದೆ ಎಂದು ನಾನು ಖಚಿತವಾಗಿ ಹೇಳುತ್ತೇನೆ. ಇನ್ನು ಪವರ್ ಉಪಯೋಗಿಸುವ ಬಗ್ಗೆ ಹೇಳುವುದಾದರೆ ಈಗ ಎಷ್ಟು ಹೆಚ್. ಪಿ. ಆಗಿದೆ ಎಂದು ನೋಡುವುದಕ್ಕೆ ಇನ್‌ಸ್ಪೆಕ್ಷನ್ ಬಂದಾಗ ಒಂದು ಲೆಕ್ಕ ಇಡಬಹುದು, ಪವರ್ ಉಪಯೋಗಿಸುವಾಗ ಒಂದು ಲೆಕ್ಕ ಇಡಬಹುದು. ಇನ್ನು ಬೆಲ್ಲದ ವಿಚಾರವಾಗಿ ಮಾತನಾಡುವುದಾದರೆ ನಮ್ಮ ಬೆಂಗಳೂರು ನಗರಕ್ಕೆ

ಹೆಚ್ಚು ಭಾಗ ಬೆಲ್ಲ ತಮಿಳುನಾಡಿನಿಂದ ಬರುತ್ತಿದೆ. ಈಗ ನಮ್ಮಲ್ಲಿ ತಾವು ಹೇಳಿದ ಹಾಗೆ 10 ಹೆಚ್.ಪಿ. ಇದ್ದಾಗ ಎರಡು ಸಾವಿರ ರೂಪಾಯಿ ಕೊಡಬೇಕೆಂದರೆ ಆ ಎರಡು ಸಾವಿರ ರೂಪಾಯಿ ಸೇರಿಸಿ ಹಾಕಬೇಕಾಗುತ್ತದೆ. ಆಗ ಹೊರಗಡೆಯಿಂದ ಬರತಕ್ಕ ಬೆಲ್ಲದ ಬೆಲೆಯನ್ನು ಕಡಮೆ ರೀತಿಯಲ್ಲಿ ಮಾರುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬೆಲೆ ಜಾಸ್ತಿಯಾಗುತ್ತದೆ. ಅಲ್ಲದೇ ಟ್ರೇಡರ್ಸ್‌ಗೆ ತೊಂದರೆಯಾಗುವುದು ಸ್ಪಷ್ಟವಾಗಿ ಕಾಣುತ್ತದೆ. ಈಗ ಹೆಚ್ಚು ಭಾಗ ಬೆಲ್ಲ, ಧರ್ಮಪುರಿ, ಕೃಷ್ಣಗಿರಿ, ತಮಿಳುನಾಡಿನ ಅಕ್ಕಪಕ್ಕದ ಊರಿನಿಂದ ಬರುತ್ತಿದೆ ಇದರಿಂದ ನಮ್ಮ ತೆರಿಗೆಗೆ ತೊಂದರೆಯಾಗುತ್ತದೆ ಎಂದು ಇಲ್ಲಿ ಸ್ಪಷ್ಟಪಡಿಸುತ್ತೇನೆ. ತಾವು ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳುತ್ತಾ ಇರುತ್ತೀರಿ ಹಾಗೆ ಗೊಬ್ಬರದ ಬೆಲೆ ಜಾಸ್ತಿ ಮಾಡುತ್ತೀರಿ, ಪವರ್ ಬೆಲೆ ಜಾಸ್ತಿ ಮಾಡುತ್ತೀರಿ, ಅದರ ಜೊತೆಗೆ ವಾಟರ್ ರೇಟ್ ಜಾಸ್ತಿ ಮಾಡುತ್ತೀರಿ, ನಂತರ ಈ ರೀತಿ ಟ್ಯಾಕ್ಸ್ ಹಾಕಿದರೆ ಹೇಗೆ ? ಎಲ್ಲಾ ವಿಧದಲ್ಲೂ ರೈತರಿಗೆ ಸಹಾಯ ಮಾಡುತ್ತೇವೆ, ರೈತರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳುವುದು ಒಂದು ವಾದ, ಮತ್ತೊಂದು ಕಡೆ ರೈತರನ್ನು ತುಳಿಯುವ ವಾದ ಮಾಡುವುದು ಬಹಳ ಶೋಚನೀಯವಾದ ವಿಚಾರ. ಬಹಳ ನಾಜೂಕಾಗಿ ತೆರಿಗೆಯನ್ನು ಏರಿಸುವುದಕ್ಕೆ ಅರ್ಥ ಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಆದುದರಿಂದ, ಹೀಗೆ, ಅಪ್ರತ್ಯಕ್ಷ ತೆರಿಗೆಯನ್ನು ಹೆಚ್ಚು ಹಾಕುವುದರಿಂದ, ಜನಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ.

ಬೇರೆ ರಾಜ್ಯದಲ್ಲಿ ಬೆಲ್ಲದ ಮೇಲಿನ ತೆರಿಗೆ ಜಾಸ್ತಿ ಇದೆ; ನಮ್ಮಲ್ಲಿ ಕಡಮೆ ಇದೆ; ಆದುದರಿಂದ ಇಲ್ಲೂ ಜಾಸ್ತಿ ಮಾಡಬೇಕೆನ್ನುವ ವಾದವನ್ನು ಒಪ್ಪುವುದು ಸೂಕ್ತವಲ್ಲ. ಹಾಗಾದರೆ ಅಲ್ಲಿ ತೆರಿಗೆ ಕಡಮೆ ಇದ್ದರೆ, ಇಲ್ಲೂ ಕೂಡ ತೆರಿಗೆಯನ್ನು ಕಡಮೆ ಮಾಡಬಹುದಲ್ಲ? ಹಾಗೆ ಇದು ಹೇಗೆ ಸಮಂಜಸವಾಗಿ ಕಾಣುವುದಿಲ್ಲವೋ, ಅಷ್ಟೇ ಸಮಂಜಸವಾಗಿ ಹೆಚ್ಚು ಮಾಡತಕ್ಕದ್ದೂ ಕಾಣುವುದಿಲ್ಲ. ಹಾಗೇನಾದರೂ ತೆರಿಗೆಯನ್ನು ಏರಿಸಿದ್ದೇ ಆದರೆ, ಅದರಿಂದ ರೈತನಿಗೆ ಬಹಳವಾಗಿ ತೊಂದರೆಯಾಗುತ್ತದೆ. ಅಷ್ಟೇ ಅಲ್ಲದೇ, ಇದನ್ನು ಅಧಿಕಾರಿಗಳು ದುರುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶಗಳು ಇವೆ. ಇದರಲ್ಲಿ ಲೆಕ್ಕವಿಲ್ಲ; ಬುಕ್ ಇಲ್ಲ; ''ಕೈ ತೂಕ; ಬಾಯಿ ಬಣ್ಣ;'' ಎಂದ ಹಾಗಾಗುತ್ತದೆ. ಆದುದರಿಂದ, ಈ ಒಂದು ಮಸೂದೆ ರೈತನ ಹಿತದೃಷ್ಟಿಯಿಂದಾಗಲೀ, ಬಳಕೆದಾರನ ಹಿತದೃಷ್ಟಿಯಿಂದಾಗಲೀ, ಜನಸಾಮಾನ್ಯರ ಹಿತದೃಷ್ಟಿಯಿಂದಾಗಲೀ ಅಥವಾ ರಾಜ್ಯದ ವ್ಯಾಪಾರ ದೃಷ್ಟಿಯಿಂದಾಗಲೀ ಸಮರ್ಪಕವಾದುದಲ್ಲ; ಇದು ಬಹಳ ಕೆಡುಕನ್ನು ಉಂಟುಮಾಡತಕ್ಕದ್ದಾಗಿದೆ. ಆದುದರಿಂದ, ಈ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸಿ, ಈ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಸನ್ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಇದಕ್ಕೆ ಸಂಬಂಧಪಟ್ಟಹಾಗೆ ಅವ್ಯವಹಾರಗಳು ನಡೆಯುತ್ತಾ ಇವೆ. ಸರ್ಕಾರಕ್ಕೆ ಬರಬೇಕಾದ ತೆರಿಗೆ ಸರಿಯಾಗಿ ಬರುತ್ತಾ ಇಲ್ಲ; ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಆದುದರಿಂದ, ಈ ತೆರಿಗೆಯನ್ನು ಯಾವ ರೀತಿ ವಸೂಲ್ ಮಾಡಬೇಕೆಂಬ ಬಗ್ಗೆ ಹೊಸ ವಿಧಾನವನ್ನು ಕಂಡುಹಿಡಿದು ಅದನ್ನು ಸಭೆಯ ಮುಂದಿಟ್ಟಿದ್ದೇವೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಸರ್ಕಾರಕ್ಕೆ ಬರಬೇಕಾದ ತೆರಿಗೆ ಸರಿಯಾಗಿ ವಸೂಲಾಗಬೇಕು ಎನ್ನುವುದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ; ಪೂರ್ತಾ ತೆರಿಗೆ ವಸೂಲಾಗುವುದಕ್ಕೆ ನನ್ನ ಸಂಪೂರ್ಣ ಸಹಕಾರ ಇದೆ; ಮತ್ತು ನಾನು ಇದಕ್ಕೆ ಬೆಂಬಲ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಉದಾಹರಣೆ ಕೊಡುವಾಗ, ಮಂಡ್ಯ ಜಿಲ್ಲೆಯೊಂದನ್ನೇ ಕೊಟ್ಟರೇ ವಿನಹ, ಬೀದರ್ ಮತ್ತು ಬೆಳಗಾಂ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ಹೇಳಲಿಲ್ಲ. ಅಲ್ಲಿ ಕೆಲವಾರು ಖಂಡಸಾರಿ ಸಕ್ಕರೆ ಕಾರ್ಖಾನೆಗಳು ಇವೆ; ಅಲ್ಲದೆ, ಒಂದು ಸಹಕಾರಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗುವುದರಲ್ಲಿ ಇದೆ. ಅಲ್ಲಿನ ಕೆಲವು ರೈತರು ಕಿರ್ಲೋಸ್ಕರ್ ಕ್ರಶಿಂಗ್ ಯಂತ್ರದಿಂದ ಕಬ್ಬಿನ ಜಲ್ಲೆಯನ್ನು ಕ್ರಷ್ ಮಾಡುತ್ತಿದ್ದಾರೆ. ಇನ್ನೂ ಕೆಲವರು 10 ಹೆಚ್.ಪಿ. ಮಿಷಿನ್‌ನಿಂದ ಕ್ರಷ್ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಇದನ್ನೇ ಹೆಚ್ಚು ಜನ ಉಪಯೋಗಿಸುತ್ತಿದ್ದಾರೆ. ಈ ಮಿಷನ್ ಇಲ್ಲದವರು, ಇರುವವರಿಂದ ಪಡೆದು ಅದಕ್ಕೆ ತಗಲಿದ ವಿದ್ಯುಚ್ಛಕ್ತಿ ವೆಚ್ಚವನ್ನು ಕೊಡುವ ಪದ್ಧತಿ ಉಂಟು. ಅಲ್ಲಿ ಇದೊಂದು ಸಹಕಾರ ಪದ್ಧತಿಯಾಗಿ ನಡೆಯುತ್ತಿದೆ. ನಂತರ ಎರಡು ದಿವಸಗಳೊಳಗಾಗಿ ಅದು ಮಾರುಕಟ್ಟೆಗೆ ಬರುತ್ತದೆ. ಇಂಥಾದ್ದಕ್ಕೆಲ್ಲಾ ನಾವು

ತೆರಿಗೆ ಹಾಕುವುದು ಹೇಗೆ? ಅಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗೆ. ರಾಜ್ಯದ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೂ ಅಂಟಿಕೊಂಡಿರುವ ಜಿಡ್ಡು ಖಾಯಿಲೆ, ಅದಕ್ಕೂ ಅಂಟಿಕೊಂಡಿದೆ. ಕಬ್ಬು ಕುಡಿಯುವುದಕ್ಕೆ ಪರ್ಮಿಷನ್ ಕೇಳಿದರೆ, ದುಡ್ಡು ಕೊಟ್ಟರೆ ಮಾತ್ರ ಸಿಗುತ್ತದೆ ಇಲ್ಲದವರಿಗೆ ಇಲ್ಲ. ಕಡಿದ ಕಬ್ಬನ್ನು ಲಾರಿಯಲ್ಲಿ ಸಾಗಿಸಬೇಕೆಂದು, ಅದಕ್ಕೂ ಹಣ ಕೊಟ್ಟು ಸಾಗಿಸುವುದಕ್ಕೆ ಪರ್ಮಿಷನ್ ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ಲಂಚಗುಳಿತನ ಜಾಸ್ತಿ ಇದೆ. ಅಷ್ಟೇ ಅಲ್ಲದೆ, 1973-74ರಲ್ಲಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್‌ಗೆ ಸಂಬಂಧಪಟ್ಟಹಾಗೆ ಒಂದು ನೋಟೀಸನ್ನು ಕೊಟ್ಟಿದ್ದರು. ಅದರಿಂದ, ಇನ್‌ಕಂಟ್ಯಾಕ್ಸ್ ಆಫೀಸರ್ಸ್‌ಗೆ ಮತ್ತು ಅಡ್ವೊಕೇಟ್‌ಗಳಿಗೂ ಅನುಕೂಲವಾಯಿತೇ ಹೊರತು, ಅಲ್ಲಿನ ರೈತರಿಗೆ ಯಾವ ಅನುಕೂಲವೂ ಆಗಿಲ್ಲ. ಅಲ್ಲಿನ ರೈತರು ಇನ್ನೂ ಬಳ್ಳಾರಿ ಮತ್ತು ಬಿದರ್‌ಗೆ ಸುತ್ತಾಡುತ್ತಾ ಇದ್ದಾರೆ. ಅಂಥಾ ಪರಿಸ್ಥಿತಿಯಲ್ಲಿ ಇರುವಾಗ ಈ ಮಸೂದೆಯನ್ನೂ ಸದನದಲ್ಲಿ ಹೇಗೆ ಪಾಸು ಮಾಡೋಣ.

ಶ್ರೀ ಎಂ. ವೈ. ಘೋರ್ಪಡೆ.— ತೆರಿಗೆ ಹಾಕುವುದೇ ಬೇಡ ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ವಿ. ಎನ್. ಪಾಟೀಲ್.— ನನ್ನ ಅಭಿಪ್ರಾಯ ಅದಲ್ಲ. ಯಾರು ತೆರಿಗೆಗಳ್ಳತನ ಮಾಡುತ್ತಾರೆ ಅವರನ್ನು ಹಿಡಿಯಿರಿ; ಅವರಿಗೆ ಹೆಚ್ಚು ಶಿಕ್ಷೆ ಹಾಕಿರಿ. ಆದರೆ ಅವನ್ನೂ ಬಿಟ್ಟು, ಎಲ್ಲರ ಮೇಲೂ ತೆರಿಗೆಗಳನ್ನು ಹಾಕಬೇಡಿ. ಇವತ್ತಿನ ದಿವಸ ತೆರಿಗೆಯ ವಸೂಲಾತಿ ಬಹಳ ಕಡಿಮೆ ಇದೆ. ಸರ್ಕಾರದವರು ತೆರಿಗೆಗಳನ್ನು ಹೆಚ್ಚು ಮಾಡುವುದರಿಂದ ಏನಾಗುತ್ತದೆ ಎಂದರೆ, ಹಿಂದೆ, ಕೋ-ಆಪರೇಟೀವ್ ಸೊಸೈಟಿಗಳಿಂದ ಮತ್ತು ಡಿ.ಸಿ.ಸಿ. ಬ್ಯಾಂಕುಗಳಿಂದ 3-4 ಸಾವಿರ ರೂಪಾಯಿಗಳಿಗೆ ತೆಗೆದುಕೊಂಡಿದ್ದ ಮೆಷಿನ್‌ಗಳನ್ನು ಇಂದು ಕೇವಲ ಒಂದು ಸಾವಿರ, 500 ರೂಪಾಯಿಗಳಿಗೆ ಮಾರುವಂಥ ಪರಿಸ್ಥಿತಿ ಬಂದಿದೆ. ಆದುದರಿಂದ, ಮಾನ್ಯ ಮಂತ್ರಿಗಳು, ಇಡೀ ರಾಜ್ಯದ ಒಂದು ಚಿತ್ರವನ್ನು ನೋಡಿ, ಈ ಬಗ್ಗೆ ಸಂಬಂಧಪಟ್ಟ ಸ್ಥಿತಿಗತಿಗಳನ್ನು ವಿಚಾರ ಮಾಡಿ ತೆರಿಗೆ ಹಾಕಿದ್ದರೆ ನನಗೆ ಸಂತೋಷವಾಗುತ್ತಿತ್ತು.

ಶ್ರೀ ಎಂ. ವೈ. ಘೋರ್ಪಡೆ.—ಪವರ್‌ಕ್ರಷರ್ಸ್‌ನ ಅವಶ್ಯಕತೆ ಇಲ್ಲದೇ ಹೋದರೆ, ಕಾಂಪೌಂಡಿಂಗ್ ಫೆಸಿಲಿಟೀಸ್ ಕೇಳಬೇಕಾದ್ದು ಇಲ್ಲ, ಟ್ಯಾಕ್ಸ್ ಕೊಡಬೇಕಾಗಿಯೂ ಇಲ್ಲ. ನನಗೆ ಗೊತ್ತಿರುವ ಹಾಗೆ, ಕಾಪೌಂಡಿಂಗ್ ಫೆಸಿಲಿಟೀಸ್ ನಿಮ್ಮ ಜಿಲ್ಲೆಯಲ್ಲಿ ರೈತರ ಹೊಲಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಕ್ರಷರ್ಸ್ ಮಾಡುತ್ತಾರೆ. ಹಳ್ಳಿ ಪ್ರದೇಶದಲ್ಲ ಏನು ಕ್ರಷರ್ ಮಾಡುತ್ತಾರೆ ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಟ್ಟರೆ ನಮಗೆ ಸಹಾಯವಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ 9 ಲಕ್ಷ ಟನ್ ಇದೆ, ಅದರಲ್ಲಿ 6 ಲಕ್ಷ ಟನ್ ಷುಗರ್‌ಕೇನ್ ಪರ್ಚೇಸ್ ಮಾಡಿದರೆ, 6+9=15 ಲಕ್ಷ ಆಗುತ್ತದೆ. ಹೀಗಿರುವಾಗ ಅವರ ಮೇಲೆ ಟ್ಯಾಕ್ಸ್ ಹಾಕಬೇಡಿ, ಎಂದು ಹೇಳಿದರೆ ಇದನ್ನು ನಾನು ಒಪ್ಪುವುದಿಲ್ಲ. ಈಗ ಇರುವುದರಿಂದ ಟ್ರಕ್ಷರಿಗೆ ಹಣ ಬರುವುದಿಲ್ಲ. ತಾವು ಒಪ್ಪಿಗೆ ಕೊಡುವುದಾದರೆ, ವರ್ಷ ವರ್ಷ ಜಾಸ್ತಿ ಮಾಡೋಣ.

ಶ್ರೀ ವಿ. ಎನ್. ಪಾಟೀಲ್.—ನಾನು ಹೇಳುವುದು ಇಷ್ಟು.

ಅಧ್ಯಕ್ಷರು.—ಇನ್ನೂ ಮೂರು ಮಸೂದೆಗಳು ಇವೆ ಒಬ್ಬೊಬ್ಬರು ಇಷ್ಟಿಷ್ಟು ಹೊತ್ತು ಮಾತನಾಡಿದರೆ ಹೇಗೆ ಪಾಟೀಲರು ಬೇಗ ಮುಗಿಸಿ.

ಶ್ರೀ ವಿ. ಎನ್. ಪಾಟೀಲ್.—ನಾನು ತಮ್ಮಲ್ಲಿ ಕೇಳಿಕೊಳ್ಳುವುದು, ಕಮರ್ಷಿಯಲ್ ಬೇಸಿಸ್ ಮೇಲೆ ಉಪಯೋಗಿಸುವವರಿಗೆ ಟ್ಯಾಕ್ಸ್ ಹಾಕಿ ಬೇಡ ಎಂದು ಹೇಳುವುದಿಲ್ಲ. ಆದರೆ, ತನ್ನ ಸ್ವಂತಕ್ಕಾಗಿ ಉಪಯೋಗಿಸುವವರ ಮೇಲೆ ಟ್ಯಾಕ್ಸ್ ಹಾಕಬೇಡಿ, ಅವರಿಗೆ ವಿನಾಯಿತಿ ಕೊಡಿ. ಅವರ ಕತ್ತಿನ ಮೇಲೆ ಕತ್ತಿ ಇಡಲಿಕ್ಕೆ ಹೋಗಬೇಡಿ.

ಶ್ರೀ ಎಂ. ವೈ. ಘೋರ್ಪಡೆ.—ಸ್ವಂತಕ್ಕೂ ಹಾಗೂ ಕಮರ್ಷಿಯಲ್ ಎರಡಕ್ಕೂ ಪವರ್ ಕ್ರಷರ್ಸ್ ಉಪಯೋಗಿಸುತ್ತಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—5 ಹೆಚ್. ಪಿ. ಗಿಂತ ಕಡಿಮೆ ಇರುವುದಕ್ಕೆ ವಿನಾಯಿತಿ ಕೊಡಿ.

† SRI K. PUTTASWAMY (Chamundeswari).— I am under the impression that this is an enabling provision and the existing law will continue to be in force. If any person having power crusher, he has to maintain account and pay on the basis of the accounts that has maintained. I do not think there would be any impediments. If for any reason he does not want to maintain accounts and he wants the facility of compounding, he is at liberty to do so. Sri Patil pointed out a case of having a small crusher to crush his own sugarcane. This case will not attract the provision of this Act because there was no purchase of sugarcane at all. If he renders service to others, he will be recovering the service charges, and he will come under tax. Some of the members are telling cases, where the party is evading taxes. When he collects hire charges it is a commercial purpose and he will have to make payment. Incidents pointed out by the Hon'ble Members are the way of evading taxes. Therefore, this Bill is not going to come in the way of any person who owns the crusher of his own for his own purposes. There is nothing new. It is going to give a scope for a man who is unable to maintain the account to take recourse to this compounding provision. I, therefore, welcome this and give my whole-hearted support to it.

3-00 P.M.

ಶ್ರೀ ಹೆಚ್ ಟಿ. ಕೃಷ್ಣಪ್ಪ.– (ನಾಗಮಂಗಲ) ಮಾನ್ಯ ಅಧ್ಯಕ್ಷರೇ, ನಾನು ಈ ಮಸೂದೆಯನ್ನು ಒಂದೇ ಒಂದು ಕಾರಣಕ್ಕಾಗಿ ವಿರೋಧಿಸುತ್ತೇನೆ. ಯಾವ ಒಂದು ತೆರಿಗೆಯಾಗಲಿ ಕೊನೆಯಲ್ಲಿ ಇದರ ಒಂದು ಭಾರ ಬಳಕೆದಾರನಿಗೆ ಬೀಳುತ್ತದೆ ಎಂದು ನಾನು ಹೇಳುತ್ತೇನೆ. ಈ ದಿವಸ ನಮಗೆ ಕಾಣಿಸುತ್ತಿದ್ದುದು ಈ ದಿನ ಬೆಲ್ಲದ ಧಾರಣೆ ಕಡಿಮೆಯಿದ್ದುದರಿಂದ ರೈತರು ಮತ್ತು ಬಡತನದಲ್ಲಿರತಕ್ಕಂಥಾವರು ಮತ್ತು ಮಧ್ಯಮ ತರಗತಿಯಲ್ಲಿರತಕ್ಕಂಥಾವರು ಸಿಹಿ ಕಾಣುತ್ತಾ ಇದ್ದುದು ಕಂಡು ಬರುತ್ತಿತ್ತು. ಈಗ ಏನಾಗಿದೆ ಅಂದರೆ ನೀವು ತರತಕ್ಕಂಥಾ ಮಸೂದೆಯಿಂದ ಆ ಸಿಹಿಯೆಲ್ಲಾ ಕಹಿಯಾಗಿ ಪರಿವರ್ತನೆಯಾಗುತ್ತಾ ಇದೆ. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಈ ಮಸೂದೆಯೇನೂ ಅಂಥಾ ಹೊಸದಲ್ಲ ಇದು ಒಂದು ಎನೇಬಲಿಂಗ್ ಪ್ರಾವಿಷನ್ ಅಂತ ಕರೆಯುತ್ತಾರೆ. ಆದರೆ ಶ್ರೀಮಾನ್ ಘೋರ್ಪಡೆಯವರ ಭಾಷಣದಲ್ಲಿ ಹೇಳುವುದಾದರೆ ಈಗ ಇರತಕ್ಕಂಥಾ ಕಾನೂನಿನಲ್ಲಿ ಇದೊಂದು ಬದಲಾವಣೆಯಾದರೆ ಮಾತ್ರ 15 ಲಕ್ಷ ರೂಪಾಯಿ ಹೆಚ್ಚುವರಿ ಬರುತ್ತದೆ. ಇದು ಬದಲಾವಣೆಯಾಗದೇ ಹೋದರೆ ಆ ಹೆಚ್ಚುವರಿ ಬರುವುದಿಲ್ಲ ಎಂದು ಹೇಳಿದರು. ಈಗ ಇರತಕ್ಕಂಥಾ ಕಾನೂನಿನಲ್ಲಿ ಈ ಬಗ್ಗೆ ಇರುವಂಥಾ ನ್ಯೂನತೆಗಳ ಬಗ್ಗೆ ವಿವರಣೆ ಕೊಟ್ಟಿಲ್ಲ. ಈ ಕಾನೂನನ್ನು ಸರಿಯಾದ ರೂಪದಲ್ಲಿ ಪ್ರಾಯೋಗಿಕ ಮಾಡಿ ಬರಬೇಕಾದಂಥ ಹಣವನ್ನು ವಸೂಲ್ಮಾಡುವುದಕ್ಕೆ ಇವರಲ್ಲಿ ಸರಿಯಾದಂಥ ಸಿಬ್ಬಂದಿ ಇಲ್ಲವೇ ಎಂದು ನಾನು ಕೇಳಬೇಕಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಈ 15-20 ಲಕ್ಷ ರೂಪಾಯಿ ಹೊರೆ ಹೆಚ್ಚಾಗಿ ಬಳಕೆದಾರನಿಗೇನೇ ಬೀಳುತ್ತದೆ. ಹೊರತು ಇನ್ನಾರಿಗೂ ಬೀಳುವುದಿಲ್ಲ, ಜೊತೆಗೆ ಇನ್ನು 15 ಲಕ್ಷ ರೂಪಾಯಿ ಜೇಬುಗಳ್ಳರಿಗೆ ಹೋಗುತ್ತದೆ. ಈ ದೃಷ್ಟಿಯನ್ನಿಟ್ಟುಕೊಂಡು ಹೇಳುತ್ತೇನೆ. ಷುಗರ್‌ಕೇನ್ ಕ್ರಷರ್ಸ್ ಅಸೋಸಿಯೇಷನ್ ಅಂತ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಒಂದು ಇದೆ. ಈ ಷುಗರ್‌ಕೇನ್ ಕ್ರಷರ್ಸ್ ಓನರ್ಸ್ ಒಂದು ಮನವಿ ಮಾಡಿಕೊಂಡಿದ್ದಾರೆ ಏನೆಂದರೆ ಈಗ ಇರತಕ್ಕಂಥಾ ಕಾನೂನಿನ ಪ್ರಕಾರ ನಮಗೆ ಬಹಳ ತೊಂದರೆಯಾಗುತ್ತಾ ಇದೆ, ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಈ ಕಾನೂನಿನಲ್ಲಿ ಏನಾದರೂ ಬದಲಾವಣೆ ಮಾಡಬೇಕು ಎಂದು. ಈಗ ತಾವು ಏನು ಮಾಡಿದ್ದೀರಿ ಎಂದರೆ ಇದರಲ್ಲಿ ಏನಾದರೂ ಬದಲಾವಣೆ ಮಾಡುವ ಬದಲು ಅವರಿಗೆ ಇನ್ನೂ ಹೆಚ್ಚಿನ ಹೊರೆಯಿರ

ತಕ್ಕಂಥಾ ಕಾನೂನನ್ನು ಮಾಡುತ್ತಿದ್ದೀರಿ. ಈಗ ಇರತಕ್ಕಂಥಾ ಕಾನೂನಿನಲ್ಲೇ ಅವರಿಗೆ ತೊಂದರೆಯಾಗದೇ ಇದ್ದ ಹಾಗೆ ಇನ್ನೂ ಹೆಚ್ಚಿಗೆ ಹಣ ವಸೂಲ್ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೇ ? ಇದನ್ನು ತಾವೇ ಯೋಚನೆ ಮಾಡಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಾನು ಮಂಡ್ಯ ಜಿಲ್ಲೆಯಲ್ಲಿ ರೈತರ ಸಂಪರ್ಕವನ್ನು ನಿಕಟವಾಗಿ ಇಟ್ಟುಕೊಂಡಿರತಕ್ಕಂಥಾವನು ಮತ್ತು ಬೆಲ್ಲ ಮಾಡತಕ್ಕಂಥಾ ಪವರ್ ಕ್ರಷರ್ಸ್ ಒನರ್ಸ್ ಅವರ ಕಷ್ಟನಷ್ಟಗಳನ್ನು ಚೆನ್ನಾಗಿ ಅರಿತುಕೊಂಡಿರುವುದರಿಂದ ನಾನು ಈ ಒಂದು ವಿಚಾರವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಎಲ್ಲರೂ ಸಹ ವ್ಯಾಪಾರ ದೃಷ್ಟಿಯಿಂದ ಇದನ್ನು ಮಾಡಿ ಬದುಕತಕ್ಕಂಥಾವರಲ್ಲ. ಸ್ವಂತ ಉಪಯೋಗಕ್ಕೂ ಕೂಡ ಕ್ರಷರ್ಸ್ ಇಟ್ಟುಕೊಂಡಿದ್ದಾರೆ. ಇದರಲ್ಲಿ ಸ್ವಂತ ಕಬ್ಬು ಯಾವುದು, ಪ್ರೈವೇಟ್‌ನವರ ಕಬ್ಬು ಯಾವುದು ಅಂತ ಲೆಕ್ಕ ಇಟ್ಟರೂ ಕೂಡ ಈ ಕಾಂಪೋಂಡಿಂಗ್ ಪವರ್‌ನ್ನು ಅಧಿಕಾರಿಗಳಿಗೆ ಕೊಟ್ಟರೆ ಯಾರು ಲಾಭಕ್ಕೋಸ್ಕರ ಕ್ರಷರ್ ಮಾಡಿರುವುದಿಲ್ಲವೋ ಅಂಥಾವರನ್ನೂ ಕೂಡ ತಪ್ಪಿತಸ್ಥ ಎಂದು ಹೊರಗಡೆ ಇಟ್ಟು ಅವನನ್ನು ಶೋಷಣೆ ಮಾಡುವುದಾದರೆ ಈ ಮಸೂದೆಯನ್ನು ಯಾರು ಒಪ್ಪುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುವುದು ಯಾರು ಸ್ವಂತಕ್ಕಾಗಿ ಕ್ರಷರ್ಸ್ ಇಟ್ಟು ಕೊಂಡಿರುತ್ತಾರೋ ಅವರೇ ಕಬ್ಬನ್ನು ಬೆಳೆದು ಅವರೇ ಕ್ರಷರ್ ಮಾಡಿಕೊಳ್ಳುತ್ತಾರೆ ಅವರು ಈ ಕಾನೂನಿಂದ ಮುಕ್ತರಾಗಬೇಕು. ಈ ಸದುದ್ದೇಶದಿಂದ ಕಾನೂನು ಮಾಡುವುದಾದರೆ ಸೂಕ್ತವಾಗಿದೆ ಮತ್ತು ನ್ಯಾಯವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯ ಮಾನ್ಯ ಮಂತ್ರಿಗಳು ಹೇಳಬೇಕು. ಈ ಬಗ್ಗೆ 15 ಲಕ್ಷ ರೂಪಾಯಿ ಲಾಭ ಹಿಂದೆ ಬರುತ್ತಾ ಇರಲಿಲ್ಲವೇ, ಈಗ ಇದನ್ನು ಕಾಂಪೋಂಡ್ ಮಾಡುವುದರಿಂದ 15 ಲಕ್ಷ ರೂಪಾಯಿ ಬರುತ್ತದೆ ಅಂತ ಯಾವರೀತಿ ತಿಳಿದುಕೊಂಡಿದ್ದೀರಿ ? ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಾನು ಸಂಪೂರ್ಣವಾಗಿ ಈ ತಿದ್ದುಪಡಿ ಮೇಲೆ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಈಗ ಮಾನ್ಯ ಕೆ. ಪುಟ್ಟಸ್ವಾಮಿಯವರು ಮಾತನಾಡಿರತಕ್ಕಂಥ ವಿಷಯದಲ್ಲಿ ಅವರ ವಾದದಲ್ಲಿ ಒಂದು ಅನುಮಾನ ನನಗೆ ಬಂದಿದೆ ಅದರಿಂದ ಮಾತನಾಡುತ್ತೇನೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ಹೇಳುತ್ತೇನೆ ಅಧಿಕಾರಿಗಳು ಇಷ್ಟು ಟ್ಯಾಕ್ಸ್ ಕಟ್ಟಬೇಕು ಎಂದು ಆರ್ಡರ್ ಮಾಡಿದಾಗ ಎಷ್ಟೋ ಜನ ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತರುತ್ತಾರೆ ಅಲ್ಲದೆ ಇದು ಇತ್ಯರ್ಥವಾಗದೇ ಪೆಂಡಿಂಗ್ ಮ್ಯಾಟರ್ ಆಗಿ ಇರುತ್ತದೆ, ಇದರಿಂದ ಹಣ ಅವರಿಂದ ತಕ್ಷಣ ವಸೂಲ್ಮಾಡುವುದಕ್ಕಾಗುವುದಿಲ್ಲ, ಇದನ್ನು ತಪ್ಪಿಸಬೇಕು ಎನ್ನುವ ಒಂದು ಸದುದ್ದೇಶದಿಂದ ನಾವು ಈ ಒಂದು ಸಿಸ್ಟಂ ಅನ್ನು ಇಂಟ್ರಡ್ಯೂಸ್ ಮಾಡುತ್ತೇವೆ ಅಂತ ಹೇಳಿದರು. 10 ಹಾರ್ಸ್ ಪವರ್ ಇದ್ದವರು ಇಷ್ಟು ಕೊಡಬೇಕು ಅಂತ ಹೇಳಿದರು. ಮತ್ತು ನನಗೆ ಏನು ಅನುಮಾನ ಇದೆ ಎಂದರೆ ಈಗ ಇರತಕ್ಕಂಥಾ ಕಾನೂನಿನಲ್ಲೇ ಮತ್ತೊಂದು ಎನ್ನೆಬಲಿಂಗ್ ಪ್ರಾವಿಷನ್ ಇದೆ ಅದು ಏನೆಂದರೆ ಈ ಷುಗರ್‌ಕೇನ್ ಕ್ರಷರ್ಸ್ ಓನರ್ಸ್ ಯಾರು ಇರುತ್ತಾರೋ ಅವರು ಲೆಕ್ಕವನ್ನಾದರೂ ಇಡಬಹುದು ಎಂದು ಈಗ ಇರತಕ್ಕಂಥಾ ಕಾನೂನಿನಲ್ಲೂ ಕೂಡ we can take recourse under the present law. ಇನ್ನೊಂದು ವಿಷಯ ಏನೆಂದರೆ ಅವನಲ್ಲಿ ಹಾರ್ಸ್ ಪವರ್ ಏನು ಇದೆ ಅದರ ಮೇಲೆ ಬರತಕ್ಕಂಥ ಯಾವುದಾದರೂ ಬೆಳೆಯಾಗಲ ಅದರ ಮೇಲೆ ತೆರಿಗೆ ಹಾಕಿದರೆ ಅವರು ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ. ಒಂದು ವೇಳೆ ಕೋರ್ಟಿಗೆ ಹೋಗಿ ಇದು ಇತ್ಯರ್ಥವಾಗದೇ ಇದ್ದ ಸಂದರ್ಭದಲ್ಲಿ ಏನು ಮಾಡುತ್ತೀರಿ ? ಆದುದರಿಂದ ಈ ಹಾರ್ಸ್ ಪವರ್ ಸಿಸ್ಟಂ ಬಗ್ಗೆ ಏನು ಒಂದು ತೆರಿಗೆ ಹಾಕುತ್ತೀರೋ ಅದರ ಬಗ್ಗೆ ನನಗೆ ಸ್ಪಷ್ಟಪಡಿಸಬೇಕು. ಈ ಬಗ್ಗೆ ಮಾನ್ಯ ಕೆ. ಪುಟ್ಟಸ್ವಾಮಿಯವರೂ ಕೂಡ ವಾದ ಮಾಡಿದರು. ಈ ಬಗ್ಗೆ ನನಗೆ ಸ್ಪಷ್ಟವಾಗಿ ತಿಳಿಸಿದರೆ ಒಳ್ಳೆಯದು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಮಂತ್ರಿಗಳು ತಂದಿರತಕ್ಕಂಥಾ ಮಸೂದೆಯಲ್ಲಿ ಕೆಲವು ಭಾಗಗಳನ್ನು ವಿರೋಧ ಮಾಡಲೇಬೇಕು ಎಂದು ನನಗೆ ಅನಿಸುತ್ತದೆ. ಏತಕ್ಕೆಂದರೆ ಡಿಕ್ಲೇರ್ಡ್ ಗೂಡ್ಸ್‌ಗೆ 3 ರಿಂದ 4 ಪರ್ಸೆಂಟ್‌ಗೆ ತೆರಿಗೆ ಮಾಡಿಬಿಟ್ಟಿದ್ದೀರಿ ಇದರಿಂದ 10 ಲ ರೂಪಾಯಿ ಬರುತ್ತದೆ ಅಲ್ಲದೆ ಟರ್ನ್ ಓವರ್‌ಮೇಲೆ 10 ಪರ್ಸೆಂಟ ಟ್ಯಾಕ್ಸ್ ಕೊಡಬೇಕು ಅಂತ ಮಾಡಿದ್ದೀರಿ ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದು

ಹೇಳುತ್ತೇನೆ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಡಿಕ್ಲೇರ್ಡ್ ಗೂಡ್ಸ್‌ಗೆ ಹೆಚ್ಚು ಹೊರೆಯನ್ನು ಹೊರಿಸಲಿಕ್ಕೆ ತಂದಿದ್ದೀರಿ ಅಂತ ಹೇಳಬೇಕಾಗುತ್ತದೆ. ಈ ಡಿಕ್ಲೇರ್ಡ್ ಗೂಡ್ಸ್ ಏನು ಇದೆ ಇದರಲ್ಲಿ ಕೊಪ್ರಾ ಬಗ್ಗೆ ಹೇಳುತ್ತೇನೆ. ಅಧ್ಯಕ್ಷರೇ ಈ ಬಗ್ಗೆ ಇದರಲ್ಲಿ ಏನಾಗಿದೆ ಎಂದರೆ ಕೊಬ್ಬರಿ ಬೆಳೆಯತಕ್ಕಂಥಾವರಿಗೆ ಇದರಿಂದ ಕೆಲಮಟ್ಟಿಗೆ ಹೊರೆಯಾಗುತ್ತದೆ. ಸಾಮಾನ್ಯವಾಗಿ ಇದನ್ನು ಉಪಯೋಗ ಮಾಡಿಕೊಳ್ಳತಕ್ಕಂಥಾವರು ಹೆಚ್ಚಾಗಿ ಉತ್ತರ ಇಂಡಿಯಾದವರು. ಈ ಕೊಪ್ರಾ ಮಾರ್ಕೆಟ್‌ಗೆ ಬರುವುದು ಸಾಮಾನ್ಯವಾಗಿ 90 ಪರ್ಸೆಂಟ್ ಅಷ್ಟು ಕ್ಯಾಲಿಕಟ್ ಮತ್ತು ಕೊಚಿನ್‌ನಿಂದ ಬರುತ್ತದೆ. ಅದಕ್ಕೆ ಕಾಂಪಿಟಿಷನ್ ರೇಟ್ ಕೂಡ ಕೊಟ್ಟು ತೆಗೆದುಕೊಳ್ಳುತ್ತಾರೆ. ನಮ್ಮ ರಾಜ್ಯದ ಕೊಬ್ಬರಿಗೂ ಅಲ್ಲಿಂದ ಬರತಕ್ಕಂಥಾ ಕೊಬ್ಬರಿಗೂ ಸುಮಾರು 120 ರೂಪಾಯಿ ಅಷ್ಟು ವ್ಯತ್ಯಾಸ ಇರುತ್ತದೆ. ತಮಗೆ ಹೇಳುವುದಾದರೆ ಒಂದು ತಿಂಗಳಿನಿಂದ ಕೊಬ್ಬರಿ ಬೆಳೆಗಾರರು ಪಾಪರ್ ಆಗಿ ಮಾರ್ಕೆಟ್ ಎಲ್ಲಾ ಬಂದ್ ಆಗಿದೆ. ಸುಮಾರು 10 ಲಕ್ಷ 15 ಲಕ್ಷ ಜನ ಇದನ್ನು ಬೆಳೆಯತಕ್ಕಂಥಾವರು ಹಣ ಇಲ್ಲದೆ ಬಹಳ ತೊಂದರೆಗೀಡಾಗಿ ಬಹಳ ಕಷ್ಟಸ್ಥಿತಿಯಲ್ಲಿದ್ದಾರೆ. ತಾವು ಯಾವುದಾದರೂ ಒಂದು ತೆರಿಗೆ ಹಾಕಿದರೂ ಕೂಡ ಅದು ಬಳಕೆದಾರರ ಹಿತದೃಷ್ಟಿಯಿಂದ ಮತ್ತು ಬೆಳೆಯುವವರ ಹಿತದೃಷ್ಟಿಯಿಂದ ನೋಡಿ ಆ ತೆರಿಗೆಯನ್ನು ಹಾಕಬೇಕು. ಈ ಡಿಕ್ಲೇರ್ಡ್ ಗೂಡ್ಸ್‌ಗೆ ನೀವು ಯದ್ವಾತದ್ವ ತೆರಿಗೆ ಹಾಕಿದರೆ ಮಾರ್ಕೆಟ್‌ನಲ್ಲಿ ಈ ಕೊಬ್ಬರಿಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ರೈತ ಇದರಿಂದ ಪಾಪರ್ ಆಗಿದ್ದಾನೆ. ಅವನು ಬಹಳ ಕಷ್ಟ ಸ್ಥಿತಿಯಲ್ಲಿದ್ದಾನೆ. ತಾವು ಇದನ್ನು ಗಮನಿಸಿ ಇದನ್ನು ಪುನರ್‌ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಟರ್ನ್‌ಓವರ್ ಟ್ಯಾಕ್ಸ್ ಏನು ಹಾಕಿದ್ದೀರಿ ಇದು ವ್ಯಾಪಾರ ಮಾಡತಕ್ಕಂಥಾವರ ಮೇಲೆ ಬೀಳುತ್ತದೆ. ಅಲ್ಲದೆ ಅವನಿಗೆ ಸೇಲ್ಸ್ ಟ್ಯಾಕ್ಸ್ ಮೇಲೆ ಪುನಃ 10 ಪರ್ಸೆಂಟ್ ತೆರಿಗೆ ಹಾಕಿದರೆ ಹೇಗೆ? ಅವನು ಯಾವರೀತಿ ಕೊಡಬೇಕು? ಅವನಿಂದ ಈ ರೀತಿ ಯದ್ವಾತದ್ವಾ ವಸೂಲ್ಮಾಡುತ್ತಾರೆ. ದಯವಿಟ್ಟು ತಾವು ಇದನ್ನು ಯೋಚನೆ ಮಾಡಿ. ಯಾವುದು ನ್ಯಾಯ ಯಾವುದು ಸಮಂಜಸವಾಗಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಯಾವ ವ್ಯಾಪಾರಸ್ಥ ತಾನೇ ಪ್ರಾಮಾಣಿಕನಾಗಿದ್ದರೆ ಈ ಲೆಕ್ಕ ಇಡುವುದಕ್ಕೆ ಇಷ್ಟಪಡುತ್ತಾನೆ, ಹೇಳಿ. ಈ ಬಗ್ಗೆ ತಾವೇ ಪರಿಶೀಲನೆ ಮಾಡಬೇಕು. ಕೊಬ್ಬರಿ ಮತ್ತು ಕೋಕನಟ್ ವಿಚಾರದಲ್ಲಿ ಹೇಳುವುದಾದರೆ ಬೇಕಾದಷ್ಟು ಕೆಟ್ಟ ಕ್ವಾಲಿಟಿ ಇರುತ್ತದೆ. ಇದನ್ನು ಯಾವರೀತಿಯಾಗಿ ಸರಳ ಮಾಡುತ್ತೀರಿ? ಇದನ್ನು ಹೇಳಿದರೆ ನನಗೆ ಸಾಕು. ಆದುದರಿಂದ ತಾವು ಈಗ ಏನೊಂದು ತಿದ್ದುಪಡಿ ತಂದಿದ್ದೀರೋ ಇದರಲ್ಲಿ ಹಾಕಿರತಕ್ಕಂಥಾದ್ದನ್ನು ಅದಷ್ಟು ಕಡಿಮೆ ಮಾಡಬೇಕು ಮತ್ತು ಇಂಥಾ ಒಂದು ತಿದ್ದುಪಡಿ ತರಬಾರದು ಅಂಥ ಅನ್ನುವುದು ನನ್ನ ಮೂಲ ಉದ್ದೇಶ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಹಾರ್ಸ್ ಪವರ್ ಆಧಾರದ ಮೇಲೆ ಏನೊಂದು ತೆರಿಗೆಯನ್ನು ಹಾಕಿದ್ದಾರೋ ಇದು ನಿಜವಾಗಿಯೂ ನಮ್ಮ ಪಾಟೀಲರು ಹೇಳಿದ ಹಾಗೆ ಪ್ರಾಮಾಣಿಕರಾದವರಿಗೆ ಇದರಲ್ಲಿ ಅನ್ಯಾಯ ಖಂಡಿತವಾಗಿ ಆಗುತ್ತದೆ. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಈ ಬಗ್ಗೆ ಹೇಳಿದ್ದು ನನಗೆ ಆಶ್ಚರ್ಯವಾಗುತ್ತದೆ. ಅವರು ಹಳ್ಳಿಯವರು, ಗಾಣ ಇಟ್ಟವರು ಮತ್ತು ಹಳ್ಳಿಯ ಮಾಹಿತಿ ತಿಳಿದುಕೊಂಡಂಥಾವರು. ಇಂಥಾವರು ಮಾತನಾಡತಕ್ಕಂಥಾ ಧಾಟಿ ನೋಡಿದರೆ ಮೈಸೂರಿನವರ ಹಾಗೆ ಬೆಂಗಳೂರಿನಲ್ಲಿ ಇದ್ದವರ ಹಾಗೆ ಮಾತನಾಡುತ್ತಿದ್ದಾರೆ ಅನ್ನುವ ಅಭಿಪ್ರಾಯ ನಮಗೆ ಬರುತ್ತದೆ. ಈವೊತ್ತು ಹಳ್ಳಿಯಲ್ಲಿ ಆಗತಕ್ಕಂಥ ವಿಚಾರ ಎಲ್ಲರಿಗೂ ಗೊತ್ತಿದೆ. ಹಿಂದೆ ಹಳ್ಳಿಯಲ್ಲಿ ಕೋಣವನ್ನು ಉಪಯೋಗಿಸಿಕೊಂಡ ಗಾಣವನ್ನು ಆಡಿಸುತ್ತಿದ್ದರು, ನಂತರ ಡೀಸೆಲ್ ಬಂತು ಅದನ್ನು ಉಪಯೋಗಿಸಿದರು, ನಂತರ ಕರೆಂಟ್ ಬಂತು. ಆ ಕರೆಂಟ್‌ನ್ನು ಉಪಯೋಗಿಸಿಕೊಂಡು ಆಡಿಸುತ್ತಾರೆ. ನಂತರ ಪಂಪ್‌ಸೆಟ್ಸ್ ಬಂದ ಮೇಲೆ ಅದಕ್ಕೇನೆ ಒಂದು ಎಕ್ಸ್‌ಟ್ರಾ ವೀಲ್ ಹಾಕಿಕೊಂಡು ಆ ಗಾಣವನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರೆ ರೈತನು ಬೆಳೆದಂಥಾ ಕಬ್ಬನ್ನು ಆಡಿಸಿಕೊಂಡಾದ ಮೇಲೆ ಅಕ್ಕಪಕ್ಕದವರು ಏನಾದರೂ ಆ ಕಬ್ಬನ್ನು ಆಡಿಸುವುದಕ್ಕೆ ತಂದುಕೊಟ್ಟರೆ ಒಂದು ಮಣಕ್ಕೆ ಅಂದರೆ ನಮ್ಮ ಕಡೆಯಲ್ಲಿ 12 ಡಬ್ಬ ಹಾಲಿಗೆ ಒಂದು ಬಾನಿ ಎಂದು ಹೇಳುತ್ತೇವೆ. ಆ ಒಂದು ಬಾನಿಗೆ ಸರ್ವಿಸ್ ಛಾರ್ಜ

ಅಂತ ಎರಡು ರೂಪಾಯಿ ತೆಗೆದುಕೊಂಡು ಅಲ್ಲಲ್ಲಿ ಆಡಿಸಿಕೊಡುತ್ತಾರೆ. ಇದು ಎಲ್ಲಾ ಕಡೆಯಲ್ಲೂ ಮಾಡುತ್ತಾರೆ. ಅವನು ತಾನು ಉಪಯೋಗಿಸುವುದಲ್ಲದೆ ನೆರೆಹೊರೆಯವರಿಗೂ ಕೂಡ ಸರ್ವಿಸ್ ಛಾರ್ಜ್ ಅಂಥ ವಸೂಲ್ಮಾಡಿ ಆ ಕಬ್ಬನ್ನು ಆಡಿಸಿಕೊಡುತ್ತಾರೆ.

ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಿಂದ ನೂರಾರು ಕೋಣಗಳನ್ನು ತರಿಸಿಕೊಂಡು ಆಲೆಮನೆಗಳ ಕೆಲಸಕ್ಕೆ ಉಪಯೋಗಿಸುತ್ತಿದ್ದರು. ಆದರೆ ಈಗ ಕೋಣನ ಬದಲು ಎತ್ತುಗಳನ್ನು ಉಪಯೋಗ ಮಾಡುತ್ತಾರೆ, ಮತ್ತೆ ಕೆಲವರು ವಿದ್ಯುತ್‌ನ್ನು ಬಳಕೆ ಮಾಡುತ್ತಿದ್ದಾರೆ. ಈ ರೀತಿ ವಿದ್ಯುತ್ ಬಳಕೆ ಮಾಡುವವರು ತಾವು ಬೆಳೆದ ಕಬ್ಬನ್ನು ಬೆಲ್ಲ ಮಾಡಿಕೊಳ್ಳುತ್ತಿದ್ದರು, ಜೊತೆಗೆ ಅಕ್ಕಪಕ್ಕದವರು ಬೆಳೆದ ಕಬ್ಬನ್ನು ಸಹ ತಮ್ಮ ಆಲೆಮನೆಯಲ್ಲಿಯೇ ಆಡಿಸಿ ಮಣಕ್ಕೆ ಒಂದೆರಡು ರೂಪಾಯಿಗಳಂತೆ ಚಾರ್ಜು ಮಾಡುತ್ತಿದ್ದರು; ಈ ರೀತಿ ವರ್ಷದಲ್ಲಿ 400, 500 ಇಲ್ಲವೇ ಒಂದು ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಆದರೆ ಕೆಲವರು ಇದನ್ನು ವ್ಯಾಪಾರಿ ಮನೋಭಾವದಿಂದ ಮಾಡುತ್ತಿಲ್ಲ. ಆದರೂ ಸಹ ಈ ತಿದ್ದುಪಡಿ ಮಸೂದೆ ಪ್ರಕಾರ ಎಲ್ಲರೂ ಲೆಕ್ಕ ಇಡಬೇಕಾಗುತ್ತದೆ. ಮಾನ್ಯ ಪುಟ್ಟಸ್ವಾಮಿಯವರ ಊರಿನಲ್ಲಿ ಯಾರಾದರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಸಾಲ ಪಡೆದು ಒಂದು ಕ್ರಷ್ ಇಟ್ಟುಕೊಂಡು ಕೆಲವರಿಗೆ ಸಹಾಯ ಮಾಡುತ್ತಿದ್ದರೆ ಆ ಬಗ್ಗೆ ಸಹ ಲೆಕ್ಕ ಇಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನಿಮ್ಮ ಅಧಿಕಾರಿಗಳು ಸಣ್ಣ ರೈತರ ಮೇಲೆ ಇನ್ನೂ ಹೆಚ್ಚಿನ ಕ್ರಮ ಕೈಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಏನು ಮಾಡಬೇಕೆಂದು ತಾವು ಹೇಳುವುದು ?

ಶ್ರೀ ಕಾಗೋಡು ತಿಮ್ಮಪ್ಪ.—ಇಂದು ರೈತರಿಗೆ ನಾನಾ ರೀತಿಯಿಂದ ಮೋಸ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಆದರ ಜೊತೆಗೆ ಇನ್ನು ಮೇಲೆ ಇದು ಸಹ ಸೇರಿಕೊಳ್ಳುತ್ತದೆ. ಈಗ ನೀರಿನ ತೆರಿಗೆ ಜಾಸ್ತಿ ಮಾಡಿದ್ದೀರಿ; ಪೇಟೆಯಲ್ಲಿ ಜಾಸ್ತಿ ಬೆಲೆ ಇದ್ದರೂ ಸಹ ಲೆವಿ ಕೊಡಬೇಕಾಗಿದೆ; ಗೊಬ್ಬರದ ಬೆಲೆ ಜಾಸ್ತಿ ಮಾಡಿದ್ದೀರಿ: ಈ ರೀತಿ ರೈತನ ತಲೆಯನ್ನು ನಾನಾ ರೀತಿಯಿಂದ ಬೋಳಿಸಿಬಿಟ್ಟಿದ್ದೀರಿ; ಅವನ ಕಷ್ಟ ಏನೆಂಬುದನ್ನು ತಿಳಿದುಕೊಳ್ಳುವುದಕ್ಕೆ ಹೋಗದೆ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೀರಿ; ಮಾನ್ಯ ಘೋರ್ಪಡೆಯವರೇನು ಆಲೆ ಮನೆಗೆ ಹೋಗಿಲ್ಲ, ಮತ್ತು ಹಾಲು ಕುಡಿದಿಲ್ಲ, ಇನ್ನು ಅವರಿಗೆ ಊರುಕೇರಿಯ ಜನರ ಸಂಕಟ ಯಾವ ರೀತಿ ತಿಳಿಯುತ್ತದೆ ? ರೈತರ ಕಷ್ಟಗಳೇನು ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಈಗ ಮಂಡ್ಯದಲ್ಲಿ ಹೆಚ್ಚು ಕಬ್ಬನ್ನು ಬೆಳೆಯುತ್ತಾರೆ. ಅಲ್ಲಿ ಸಕ್ಕರೆ ಕಾರ್ಖಾನೆ ಜೊತೆಗೆ ಖಂಡಸಾರಿ ಕಾರ್ಖಾನೆಗಳು ಸಹ ಇವೆ. ಅದೇ ರೀತಿ ಶಿವಮೊಗ್ಗ, ಭದ್ರಾವತಿಯ ಅಜುಬಾಜು ಹೆಚ್ಚು ಕಬ್ಬನ್ನು ಬೆಳೆಯುತ್ತಾರೆ. ಪಾಡವಪುರ, ತರೀಕೆರೆ ತಾಲ್ಲೂಕ್‌ಗಳಲ್ಲಿಯೂ ಹೆಚ್ಚು ಕಬ್ಬನ್ನು ಬೆಳೆಯುತ್ತಾರೆ. ಇಂತಹ ಕಡೆಗಳಲ್ಲಿ ವ್ಯಾಪಾರ ದೃಷ್ಟಿಯಿಂದ ಬೆಲ್ಲವನ್ನು ತಯಾರು ಮಾಡುವವರಿದ್ದಾರೆ, ಆದರೆ ಬೇರೆ ಕಡೆಗಳಲ್ಲಿ ಒಂದು ಎಕರೆ, ಅರ್ಧ ಎಕರೆ. ಕಾಲು ಎಕರೆಗಳಲ್ಲಿ ಕಬ್ಬನ್ನು ಬೆಳೆದು ತಮ್ಮ ಮನೆಗಾಗಿ ಬೆಲ್ಲವನ್ನು ಮಾಡಿಕೊಳ್ಳುವವರಿದ್ದಾರೆ, ತಾವೇ ಬೆಲ್ಲವನ್ನು ಗಾಣದ ಮೂಲಕ ಮಾಡಿಕೊಳ್ಳಲು 8 ದಿವಸ ಬೇಕಾಗುತ್ತದೆಂದು ಪವರ್–ಕ್ರಷರ್ ಯಾರು ಇಟ್ಟಿರುತ್ತಾರೋ ಅವರ ಬಳಿ ಹೋಗಿ ಬೆಲ್ಲವನ್ನು ಮಾಡಿಸಿಕೊಳ್ಳುವವರಿದ್ದಾರೆ. ಇಂಥಾದ್ದಕ್ಕೆ ತಾವು ಇದರಿಂದ ರಿಯಾಯಿತಿ ಕೊಡಬೇಕಾಗುತ್ತದೆ. ಆದರೆ ಎಲ್ಲಿ ಹೆಚ್ಚು ಕಬ್ಬನ್ನು ಬೆಳೆಯುತ್ತಾರೆ ಅಂತಹ ಕಡೆ ಬೇಕಾದರೆ ಇದನ್ನು ಅನ್ವಯ ಮಾಡಿ. ಈಗ ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ಜಿಲ್ಲೆ, ನಾಗಮಂಗಲ ಮುಂತಾದಕಡೆ ಹೆಚ್ಚು ಕಬ್ಬನ್ನು ಬೆಳೆಯುವುದಿಲ್ಲ, ಬೆಳೆದರೂ ಸಹ ತಮ್ಮ ಸ್ವಂತ ಉಪಯೋಗಕ್ಕೆ ಬೆಳೆದುಕೊಳ್ಳುತ್ತಾರೆ. ಆದರೆ ತಾವು ಬೆಳೆದವರೆಲ್ಲಾ ಲೆಕ್ಕ ಇಡಬೇಕೆಂದು ಹೇಳಿದರೆ, ಅದರಿಂದ ರೈತರಿಗೆ ಕಷ್ಟವಾಗುತ್ತದೆ. ಇದರಿಂದ ಅಧಿಕಾರಿಗೆ ಹೆಚ್ಚು ಅಧಿಕಾರ ಕೊಟ್ಟಂತೆ ಆಗುತ್ತದೆ. ಇದು ಸರಿಯಲ್ಲ. ಎಲ್ಲಿ ಹೆಚ್ಚು ಬೆಳೆಯುತ್ತಾರೆ, ಎಲ್ಲಿ ಕಡಿಮೆ ಬೆಳೆಯುತ್ತಾರೆಂಬುದನ್ನು ಪತ್ತೆಹಚ್ಚುವುದು ಬಹಳ ಸುಲಭ, ಆದಕಾರಣ ಯಾವ ಯಾವ ತಾಲ್ಲೂಕ್‌ಗಳಲ್ಲಿ 5 ಸಾವಿರ ಎಕರೆಗಳಿಗಿಂತ ಹೆಚ್ಚು ವಿಸ್ತೀರ್ಣದಲ್ಲಿ ಕಬ್ಬನ್ನು ಬೆಳೆಯುತ್ತಾರೆಂಬುದನ್ನು ನೋಡಿಕೊಂಡು ಅಂತಹ ಕಡೆಗಳಲ್ಲಿ ಈ ತೆರಿಗೆ ಹಾಕಿ, ಆದರೆ ಯಾವ ತಾಲ್ಲೂಕ್‌ಗಳಲ್ಲಿ ಒಂದು ಸಾವಿರ ಎಕರೆಗಿಂತಲೂ ಕಡಿಮೆ ವಿಸ್ತೀರ್ಣದಲ್ಲಿ ಕಬ್ಬನ್ನು ಬೆಳೆಯುತ್ತಾರೋ ಅಂತಹ ಕಡೆ ಇದನ್ನು ಹಾಕಬೇಡಿ, ಇಂತಹ ಹೆಚ್ಚು ಕಬ್ಬು ಬೆಳೆಯುವ ಪಾಕೆಟ್‌ಗಳನ್ನು ಕಂಡುಹಿಡಿಯುವುದು ಕಷ್ಟದ ಕೆಲಸವೇನೂ ಅಲ್ಲ. ಈಗ ಸೇಲ್ಸ್‌ಟ್ಯಾಕ್ಸ್ ಆಡ್ವೈಸರಿ

ಕಮಿಟಿ ಎಂಬುದು ಇದೆ, ಆ ಕಮಿಟಿಯವರು ಈ ಕೆಲಸ ಮಾಡಬಹುದು, ಅದನ್ನು ಮಾಡದೆ ಈ ರೀತಿ ಆತುರಾತುರವಾಗಿ ಜಾರಿಗೆ ತರುವುದಕ್ಕೆ ಹೊರಟಿರುವುದು ಸರಿಯಲ್ಲ. ಮುಖ್ಯವಾಗಿ ವ್ಯವಸಾಯಗಾರರನ್ನು ಒಬ್ಬ ವೈರಿ ಎಂಬ ಭಾವನೆಯಿಂದ ನೋಡಬೇಡಿ. ಇವೊತ್ತು ರೈತನು ಒಂದು ಬೆಳೆ ತೆಗೆಯಲು ಏನು ಖರ್ಚು ಮಾಡುತ್ತಾನೆ. ಅದನ್ನು ವಾಪಸ್ ಪಡೆಯುವುದು ಕಷ್ಟವಿದೆ. ಅಂತಹವರ ಮೇಲೆ ಈ ಒಂದು ಹೊಸ ತೆರಿಗೆ ಹಾಕುವುದಕ್ಕೆ ಹೊರಟಿರುವುದು ಸರಿಯಲ್ಲ. ಆದರೆ ಸಾಮೂಹಿಕವಾಗಿ ಎಲ್ಲರ ಮೇಲೂ ಇದನ್ನು ಹಾಕುವುದು ಬೇಡ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಏನೆಂದರೆ, ನಾನು ನನ್ನ ತೋಟದಲ್ಲಿ ಐದು ಎಕರೆಯ ಮಟ್ಟಿಗೆ ಕಬ್ಬನ್ನು ಬೆಳೆದು ಬೆಲ್ಲ ಮಾಡಿಕೊಳ್ಳುವುದರ ಜೊತೆಗೆ ನನ್ನ ತೋಟದ ಅಕ್ಕಪಕ್ಕದಲ್ಲಿ ಬೆಳೆದವರ ಕಬ್ಬನ್ನು ಸಹ ಫ್ಲೋರ್ ಮಿಲ್‌ನವರ ತರಹ ಚಾರ್ಜ್ ಮಾಡಿ ಬೆಲ್ಲ ಮಾಡಿಕೊಡುತ್ತೇನೆ. ಆಗ ನನಗೆ ಈ ತಿದ್ದುಪಡಿಯ ಪ್ರಕಾರ ಟ್ಯಾಕ್ಸ್ ಹಾಕುತ್ತಾರೆಯೇ ಅಥವಾ ಬಿಡುತ್ತಾರೆಯೇ ?

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಆಲೆಮನೆ ಕಟ್ಟಿರುವುದನ್ನು ಮಾನ್ಯ ಘೋರ್ಪಡೆಯವರು ನೋಡಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ ;

ಶ್ರೀ ಎಂ. ವೈ. ಘೋರ್ಪಡೆ.—ನಾನು ಕಬ್ಬನ್ನು ಬೆಳೆದಿದ್ದೇನೆ ಮತ್ತು ಗಾಣದ ಮೂಲಕ ಬೆಲ್ಲವನ್ನು ಮಾಡಿಸಿದ್ದೇನೆ ; ಆದರೆ ಪವರ್ ಕ್ರಷರ್‌ನ್ನು ಉಪಯೋಗ ಮಾಡಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಮಲೆನಾಡಿನ ಭಾಗಗಳಲ್ಲಿ ಹೆಚ್ಚು ಮಳೆ ಬೀಳುತ್ತದೆ. ಅಂತಹ ಕಡೆಗಳಲ್ಲಿಯೂ ರೈತರು ಕಷ್ಟಪಟ್ಟು ಗೊಬ್ಬರ ಹಾಕಿ ಕಬ್ಬನ್ನು ಬೆಳೆಯುತ್ತಾರೆ, ನಂತರ ಆ ಮಳೆಯಲ್ಲಿಯೇ ಅದನ್ನು ಬೆಲ್ಲ ಮಾಡಿ, ಪೇಟೆಗೆ ತಂದು ಮಾರಾಟ ಮಾಡುವುದರಲ್ಲಿ ಹೆಚ್ಚಿನ ಕಷ್ಟವನ್ನು ಅನುಭವಿಸಿರುತ್ತಾರೆ. ಆ ಒಂದು ಕಷ್ಟವನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ ಅಷ್ಟು ಕಷ್ಟವಿದ್ದರೂ ಆ ಕೆಲಸ ಮಾಡುತ್ತಾರೆ, ರಾತ್ರಿ ಹಗಲು ಎನ್ನದೆ ಮನೆಯ ದೊಡ್ಡವರು ಮತ್ತು ಸಣ್ಣವರು ಆ ಕೆಲಸ ಮಾಡುತ್ತಾರೆ. ಸೋನೆ ಮಳೆಯ ಕಾರಣದಿಂದ ಜಾಗವೆಲ್ಲಾ ಗಲೀಜಾಗಿರುತ್ತದೆ, ಆದರೂ ಗಾಣಕ್ಕೆ ಕಟ್ಟಿದ ಎತ್ತುಗಳು ತಿರುಗಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಮನುಷ್ಯರು ಕಷ್ಟಕ್ಕಿಂತ ಎತ್ತುಗಳ ಕಷ್ಟವೇ ಜಾಸ್ತಿಯಿರುತ್ತದೆಂದು ಹಳೆಯ ರೈತರು ಹೇಳುತ್ತಾರೆ. ಈ ಎತ್ತುಗಳ ಕಷ್ಟವನ್ನು ತಪ್ಪಿಸುವ ದೃಷ್ಟಿಯಿಂದ ಇಂದು ಪವರ್‌ಕ್ರಷರನ್ನು ಕೆಲವರು ಇಟ್ಟುಕೊಂಡಿರುತ್ತಾರೆ. ಅಂತಹವರ ಹತ್ತಿರ ಬೇರೆಯವರು ಸಹ ತಾವು ಬೆಳೆದ ಕಬ್ಬನ್ನು ತೆಗೆದುಕೊಂಡು ಹೋಗಿ ಬೆಲ್ಲ ಮಾಡಿಸಿಕೊಳ್ಳುತ್ತಾರೆ. ಇಂತಹವರ ಮೇಲೆಲ್ಲಾ ಮಾನ್ಯ ಅರ್ಥ ಸಚಿವರು ತೆರಿಗೆ ಹಾಕಬಾರದಾಗಿತ್ತು ; ಇದರ ಜೊತೆಗೆ ಬೆಲ್ಲದ ಬೆಲೆ ಯಾವಾಗಲೂ ಜಾಸ್ತಿಯಿರುವುದಿಲ್ಲ, ಎಷ್ಟೋ ಸಲ ಬೆಲ್ಲದ ಬೆಲೆ ಇಳಿದುಹೋದ ಕಾರಣ, ಕೆಲವರು ತಮ್ಮ ಕಬ್ಬನ್ನು ಗಾಣ ಆಡಿಸದೆ ಒಣಗಿಸಿಬಿಟ್ಟರು ಮತ್ತೆ ಕೆಲವರು ಬೆಂಕಿಗೆ ಹಾಕಿದರು; ಪ್ರತಿವರ್ಷವೂ ಇದರ ಬೆಲೆ ಜಾಸ್ತಿಯಿರುವುದಿಲ್ಲ; 4-5 ವರ್ಷಕ್ಕೆ ಒಂದು ಸಲ ಇದರ ಬೆಲೆ ಜಾಸ್ತಿಯಾಗಿ ರೈತರಿಗೆ ಏನಾದರು ಲಾಭ ಬರಬಹುದೇ ಹೊರತು ಪ್ರತಿ ವರ್ಷ ಲಾಭ ಇದರಿಂದ ಬರುವುದಿಲ್ಲ; ಇಷ್ಟೊಂದು ಕಷ್ಟಪಟ್ಟು ಬೆಳೆಯನ್ನು ಬೆಳೆಯುತ್ತಾರೆ. ಅವರಿಗೆ ಸರಿಯಾದ ಬೆಲೆ ಕೊಡಿ ಎಂದು ಹೇಳಿದರೆ ಅದಕ್ಕೆ ಸರಿಯಾದ ಬೆಲೆ ಕೊಡುವುದಕ್ಕೆ ತಯಾರಿಲ್ಲ. ಅದೇ 100 ರೂಪಾಯಿ ಆದಾಯ ಬಂದರೆ 10 ರೂಪಾಯಿ ಸರ್ಕಾರಕ್ಕೆ ಟ್ಯಾಕ್ಸ್ ಕೊಡಿ ಎಂದರೆ ಹೇಗೆ ? ಕೆಲವು ಸಾರಿ ಒಂದು ಟನ್ನಿಗೆ 25-30 ರೂಪಾಯಿ ಲುಕ್ಷಾನು ಪಟ್ಟುಕೊಂಡರೂ ಸರ್ಕಾರದವರು ಅವರ ಸಹಾಯಕ್ಕೆ ಬರುವುದಿಲ್ಲ ಸ್ವಾಮಿ. ನಾನು ಹೇಳುವುದು ಇಷ್ಟೇ ಈ ಎರಡು ಕಾರಣಗಳಿಂದ ರೈತರ ಬಗ್ಗೆ ಮಾನವೀಯ ದೃಷ್ಟಿ ಇಟ್ಟು ಅವರು ಬಾಳಲಿ ಬದುಕಲಿ ಎನ್ನುವ ಹಿತ ದೃಷ್ಟಿಯಿಂದ ದಯವಿಟ್ಟು ಟ್ಯಾಕ್ಸ್ ತೆಗೆದುಬಿಡಿ. ಅವರ ಕಷ್ಟಗಳನ್ನು ನೋಡಿ ನೋಡಿ ಅವರ ಮೇಲೆ ಮತ್ತೆ ಭಾರವನ್ನು ಹಾಕಬೇಡಿ. ಅದರಿಂದ ದೇಶಕ್ಕೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಮಾನ್ಯ ಅರ್ಥ ಸಚಿವರನ್ನು ಕೇಳುತ್ತೇನೆ. ಯಾರು ದೇಶದ ಅಭಿವೃದ್ಧಿಗೆ ಮತ್ತು ಉತ್ಪತ್ತಿಗೆ ಕಾರಣಕರ್ತರಾಗಿದ್ದಾರೆ ಅವರ ಮೇಲೆ ಸ್ವಲ್ಪ ಅನುಕಂಪವಿಡಬೇಕೆಂದು ಆ ದೃಷ್ಟಿಯಿಂದ ಹೇಳುತ್ತೇನೆ. ರೇಟು ಬಿದ್ದುಹೋಗಿ ಅವರಿಗೆ ಅನುಭವಿಸಲಾರದ ನಷ್ಟವಾದಾಗ ಯಾರೂ ಸಹಾಯ ಮಾಡಲಿಲ್ಲವೆಂದು

ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ರೀತಿ ಟ್ಯಾಕ್ಸ್ ಹಾಕುವುದಾದರೆ ಅವರು ಉದ್ಧಾರವಾಗುವುದಿಲ್ಲ. ಬೆಲ್ಲದ ಬೆಲೆ 180 ರೂಪಾಯಿಗೆ ಹೋದಾಗ ಹೊರದೇಶಗಳಿಗೆ ಕಳುಹಿಸದಂತೆ ರಿಸ್ಟ್ರಿಕ್ಷನ್ ಹಾಕಿದಿರಿ ಅದರಿಂದ ರೇಟು ಬಿದ್ದುಹೋಯಿತು. ರೇಟು ಜಾಸ್ತಿಯಾದರೆ ಕನ್ಸೂಮರ್ಸ್‌ಗೆ ತೊಂದರೆಯಾಗುತ್ತದೆಂದು ಅದನ್ನು ಇಳಿಸುವುದಕ್ಕೆ ಪ್ರಯತ್ನಮಾಡುತ್ತೀರಿ. ಅದೇ ಟ್ಯಾಕ್ಸ್ ಹಾಕುವಾಗ ಬಡ ರೈತರ ಮೇಲೆ ನಿಮಗೆ ಅನುಕಂಪ ಬರುವದಿಲ್ಲವೇ ? ನೀವು ಯಾವಾಗ ಅವರು ಕಷ್ಟಕ್ಕೆ ಸಿಕ್ಕಿಕೊಂಡಾಗ ಅವರ ಸಹಾಯಕ್ಕೆ ಬರದೆ ಹೋದಮೇಲೆ ಈಗ ಅವರ ಮೇಲೆ ಟ್ಯಾಕ್ಸ್ ಹಾಕಿ ಅವರಿಗೆ ತೊಂದರೆ ಮಾಡುವುದಕ್ಕೆ ಏತಕ್ಕೆ ಹೋಗುತ್ತೀರಿ ಆದ್ದರಿಂದ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

†ಶ್ರೀ ಎಂ. ವೈ ಘೋರ್ಪಡೆ— ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದ ಹಾಗೆ ಈ ವಿಚಾರ ರೈತರಿಗೆ ಅನಾನುಕೂಲ ಮಾಡುವ ದೃಷ್ಟಿಯಿಂದ ಮಾಡಿರತಕ್ಕಂಥಾದ್ದಲ್ಲ. ಇವೊತ್ತು ಒಂದು ಕಾನೂನು ಇದೆ. ಅದು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬರುತ್ತಿದೆ? ಈ ಕಾನೂನಿಂದ ಹಲವಾರು ರೈತರಿಗೆ ತೊಂದರೆಯಾಗುತ್ತದೆ ಎನ್ನುವುದು ಒಂದು ಕಡೆ ಇನ್ನೊಂದು ಕಡೆ ಸರ್ಕಾರದ ಬೊಕ್ಕಸಕ್ಕೆ ಏನೂ ಬರುವುದಿಲ್ಲ ಎನ್ನುವುದು. ಉದಾಹರಣೆಗೆ ಹೇಳುವುದಾದರೆ ಮಂಡ್ಯ ಜಿಲ್ಲೆಯಲ್ಲಿ ಬೇರೆ ಜಿಲ್ಲೆಗಳಲ್ಲಿ ಪರಿಸ್ಥಿತಿ ಬೇರೆ. 20 ಲಕ್ಷ ಟನ್ ಉತ್ಪಾದನೆ ಆದರೆ ಅದರಲ್ಲಿ ನಾವು ಲೆಕ್ಕಕ್ಕೆ ತೆಗೆದುಕೊಳ್ಳುವುದು 9 ಲಕ್ಷ ಟನ್. ಅದರಲ್ಲಿ ಶುಗರ್ ಕೇನ್ ಖಂಡಸಾರಿಗೆ ಮೂರನೇ ಎರಡು ಭಾಗ ಹೋದರೆ ರೈತರ ಪರವಾಗಿ ಕ್ರಷರ್ ಮಾಡುವುದು 3ನೇ ಒಂದು ಭಾಗ ಈಗಿರುವ ಸಂದರ್ಭದಲ್ಲಿ 50 ಲಕ್ಷ ರೂಪಾಯಿ ಬರಬೇಕಾಗುತ್ತದೆ. ನಾವು ಅಲ್ಲಿ ಹೋಗಿ ನೋಡುವಷ್ಟು ಪ್ರಯತ್ನ ಮಾಡಿದ್ದೇವೆ. ಖಂಡಸಾರಿ ಬಗ್ಗೆ ತಮ್ಮ ತಮ್ಮ ಕಳಕಳಿ ತೋರಿಸಿದ್ದೀರಿ. ಇವತ್ತಿನ ದಿವಸ ಖಂಡಸಾರಿ ಶುಗರ್ ಫ್ಯಾಕ್ಟರಿಗಿಂತ ಚೆನ್ನಾಗಿ ಕೆಲಸ ಮಾಡಬಲ್ಲದು. ಪ್ರಾಫಿಟ್ ಕೂಡ ಅಷ್ಟೆ ಅಲ್ಲಿ ಜಾಸ್ತಿ ಇರಬಹುದು. ಪರ್ ಟನ್ ಶುಗರ್ ಫ್ಯಾಕ್ಟರಿಯಲ್ಲಿ 16 ರೂಪಾಯಿ ಹಾಕಿದರೆ ಖಂಡಸಾರಿ ಮೇಲೆ ಕಡಿಮೆ ಇದೆ. ನಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು ಹೇಳುವುದಾದರೆ ಏತಕ್ಕೆ ಖಂಡಸಾರಿಗೆ ಕಡಿಮೆ ಮಾಡುತ್ತೀರಿ ಎಂದು. ಶುಗರ್ ಫ್ಯಾಕ್ಟರಿಗೆ ಇರುವಷ್ಟು ತೊಂದರೆಗಳು ಖಂಡಸಾರಿಗೆ ಇರುವುದಿಲ್ಲ. ಆದರೆ ನಾವು ಇವತ್ತಿನ ದಿವಸ ಚರ್ಚೆ ಮಾಡುವುದಕ್ಕೆ ಹೋದರೆ ಅವರು ಹೇಳಿದ ಹಾಗೆ ಅದರ್ ದೆನ್ ಶುಗರ್ ಫ್ಯಾಕ್ಟರೀಸು ಕೇನ್ ಕೊಂಡುಕೊಳ್ಳುವುದರ ಮೇಲೆ 9 ರೂಪಾಯಿ ಟ್ಯಾಕ್ಸ್ ಹಾಕಿದ್ದೇವೆ. ಇನ್ನು ಬೆಲ್ಲದ ಮೇಲೆ ಸೇಲ್ಸ್‌ಟ್ಯಾಕ್ಸ್ ಎಂದು 2 ಪರ್ಸೆಂಟ್ ಹಾಕಿದ್ದೇವೆ. ಅದನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ಬಹಳ ಕಡಿಮೆ. ಇನ್ನು ಸ್ವಂತ ಕ್ಯೋನ್ಕರ ಅವರು ಮಾಡಿದಲ್ಲಿ ನಾವು ಯೋಚನೆ ಮಾಡಬಹುದು. ಆದರೆ ಈ ಚರ್ಚೆಯಲ್ಲಿ ಅದರ ಬಗ್ಗೆ ಯಾರೂ ಭಾಗವಹಿಸಲಿಲ್ಲ. ನಾನು ಆಗಲೇ ಹೇಳಿದ ಹಾಗೆ ನಮಗೆ ಬರತಕ್ಕಂಥಾದ್ದು ಮಂಡ್ಯ ಜಿಲ್ಲೆಯಲ್ಲಿ 50 ಲಕ್ಷ ರೂಪಾಯಿ ಬರಬೇಕು. 15 ಲಕ್ಷ ರೂಪಾಯಿ ಮಾತ್ರ ಕಲೆಕ್ಟ್ ಮಾಡಿದ್ದೇವೆ. ಇನ್ನು ಕ್ರಷರ್ 10 ಎಚ್.ಪಿ. ಪವರ್ ಇದ್ದರೆ 750 ಟನ್ ಕ್ರಷ್ ಮಾಡಲಿಕ್ಕೆ ಸಾಧ್ಯ. ಆದರೆ ನಾವು ಕೇವಲ 80 ದಿವಸಗಳನ್ನು ಲೆಕ್ಕಕ್ಕೆ ತೆಗೆದುಕೊಂಡು 6 ಟನ್ ಒಂದು ದಿವಸಕ್ಕೆ ಎಂದು ಒಟ್ಟು 750 ಟನ್ ಎಂದು ಗೊತ್ತುಮಾಡಲಾಗಿದೆ. ಅದರ ಮೇಲೆ 9 ರೂಪಾಯಿ ಹಾಕುವ ಟ್ಯಾಕ್ಸ್ 7 ಸಾವಿರಕ್ಕೂ ಜಾಸ್ತಿಯಾಗುತ್ತದೆ. ಆದರಿಂದ ನಾವು ಕೇವಲ 2 ಸಾವಿರ ರೂಪಾಯಿ 1 ಎಚ್‌ಪಿ ಪವರ್ ಇದ್ದರೆ, 10 ಎಚ್‌ಪಿ ಪವರ್ ಇದ್ದರೆ 7 ಸಾವಿರ ರೂಪಾಯಿ ಕಾನೂನು ಪ್ರಕಾರ ಕೊಡಬೇಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳು ಹೇಳುವ ರೀತಿಯಲ್ಲಿ ವರ್ಷದಲ್ಲಿ ಕೇವಲ ಒಂದೆರಡು ತಿಂಗಳು ಮಾತ್ರ ಕ್ರಷ್ ಮಾಡುವುದು. ತಾವು ಹೇಳಿದ ರೀತಿ 7-8 ತಿಂಗಳು ಕ್ರಷ್ ಮಾಡುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಇದನ್ನೆಲ್ಲಾ ನೋಡಿಕೊಂಡು ಬರುವುದಕ್ಕೆ ಆಫೀಸರ್ಸ್ ಕಳುಹಿಸಿಕೊಟ್ಟಿದ್ದೇವೆ. ಪವರ್ ಕ್ರಷರ್ ನೋಡಿಬಿಟ್ಟು ಬಂದಿದಾರೆ ಒಂದು ವರ್ಷದಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಎನ್ನುವ ಬಗ್ಗೆ ಅಂಕಿ ಸಂಖ್ಯೆಗಳು ಇವೆ. ಬರೀ ಆಫೀಸ್‌ನಲ್ಲಿ ಕುಳಿತುಕೊಂಡು ಹೇಳುತ್ತಿಲ್ಲ. ಅಂಕಿ ಅಂಶಗಳು ಸಂಗ್ರಹ ಮಾಡಿದ್ದೇವೆ. ಆದ್ದರಿಂದ ಈ ತೀರ್ಮಾನಕ್ಕೆ ಬಂದಿದ್ದೇವೆ ಇದು ಜಾಸ್ತಿಯಲ್ಲ. ಸುಮಾರು 750 ಟನ್‌ನಿಂದ 1000 ಟನ್ ಮಾಡಿದ್ದು ನಾವು ಆದರಲ್ಲಿ ಮೂರನೇ

ಒಂದು ಭಾಗಕ್ಕೆ ಟ್ಯಾಕ್ಸ್ ಹಾಕುತ್ತಿದ್ದೇವೆ ಅಂದರೆ ಏನಾಗುತ್ತದೆ. ಮೂರನೇ ಎರಡು ಭಾಗ ಕ್ಯಾಪಾಸಿಟಿ ಕೇನ್ ಪರ್ಚೇಸ್ ಮಾಡಿದ್ದು ಎಲ್ಲಾ ಲಿಬರಲ್ಲಾಗಿ ಅಸೆಸ್ಮೆಂಟ್ ಮೇಲೆ ಹಾಕುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳುತ್ತಾರೆ ಬಹಳ ತೊಂದರೆ ಎಂದು ಇರಬಹುದು ರೈತರ ಮೇಲೆ ಟ್ಯಾಕ್ಸ್ ಬೀಳುವುದಿಲ್ಲ. ಕೇನ್ ಪರಚೇಸ್ ಮಾಡದೆ ಹೋದರೆ ಟಾಕ್ಸ್ ಬೀಳುವುದಿಲ್ಲ.

3-30 P. M.

ಈಗ ಮಂಡ್ಯಾ ಜಿಲ್ಲೆಯಲ್ಲಿ ಮೂರು ದೊಡ್ಡ ಸಕ್ಕರೆ ಕಾರ್ಖಾನೆಗಳು ಕೆಲಸಮಾಡುತ್ತಾ ಇವೆ. ಆ ಸಕ್ಕರೆ ಕಾರ್ಖಾನೆಗಳಲ್ಲಿ ವರ್ಷಂಪ್ರತಿ 8 ತಿಂಗಳು ಅಥವಾ ನಿಗಧಿಯಾದ ಕಾಲಾವಧಿವರೆಗೆ ಅಷ್ಟು ವರ್ಷಗಳ ಕಾಲ ಕೆಲಸಮಾಡಬೇಕಾದರೆ ಎಷ್ಟು ಕಬ್ಬು ಬೇಕಾಗುತ್ತದೋ ಅಷ್ಟು ಕಬ್ಬನ್ನೂ ಪ್ಯೂರೈಕೆಮಾಡಬೇಕಾದರೆ ನನಗೆ ತಿಳಿದಮಟ್ಟಿಗೆ 860 ಕ್ರಷರ್ಸ್ ಏನಿವೆಯೋ ಅವುಗಳಿಗೆ ಅಷ್ಟು ಕಬ್ಬು ಸಿಗಬಹುದು. ಮಂಡ್ಯಾ ಜಿಲ್ಲೆಯಲ್ಲಿ 20 ಲಕ್ಷ ಟನ್ ಕಬ್ಬು ಇದೆ. ಸುಮಾರು 10 ಲಕ್ಷ ಟನ್‌ಗಳಷ್ಟು ಕಬ್ಬನ್ನು ಅಲ್ಲಿನ ನಾಲ್ಕು ಷುಗರ್ ಫ್ಯಾಕ್ಟರೀಸ್ ಉಪಯೋಗ ಮಾಡುತ್ತಿವೆ, ಆ ಜಿಲ್ಲೆಯಲ್ಲಿ ಖಂಡಸಾರಿ ಯೂನಿಟ್‌ಗಳನ್ನೂ ಸಹ ಉಪಯೋಗ ಮಾಡುತ್ತಿದ್ದಾರೆ. 20 ಲಕ್ಷ ಟನ್‌ಗಳ ಪೈಕಿ ಇನ್ನತ್ತು ಲಕ್ಷ ಟನ್ ಕಬ್ಬು ಎಲ್ಲಿ ಹೋಯಿತು ಎಂಬುದೇ ಗೊತ್ತಾಗಲಿಲ್ಲ. ಇದರಿಂದಲೂ ಕೂಡ ಬಹಳ ತೊಂದರೆಯಾಗುತ್ತಿದೆಂದು ಅದಕ್ಕೆ ಒಂದು ವಿಧಾನವನ್ನು ಕಂಡುಹಿಡಿದು ಎಲ್ಲಿ ಇದರಲ್ಲಿ ಲೋಪವಾಗುತ್ತಿದೆಯೆಂದು ನೋಡಬೇಕಾಗಿದೆ. ಆದರೆ ಇದನ್ನು ಹಾಗೆಯೇ ಸಂಪೂರ್ಣವಾಗಿ ಕೈಬಿಡುವ ಹಾಗೆ ಇಲ್ಲ. ಕೋರ್ಟಿನಲ್ಲಿ ಅವರು ಹೋಗಿ ಏನು ಹೇಳುತ್ತಾರೆಂಬುದೂ ಸಹ ಪ್ರೂವ್ ಆಗಬೇಕು. ಅವರು ಕೊಂಡದ್ದರಲ್ಲಿ ವೇಸ್ಟ್ ಮಾಡಿದ್ದು ಎಷ್ಟು ಅಂದರೆ ಅದಕ್ಕೆ ಲೆಕ್ಕ ಕೇಳಿದರೆ ಅವರಿಗೆ ಅದನ್ನೂ ಸಹ ಕೊಡುವುದಕ್ಕಾಗುವುದಿಲ್ಲ. ಲೆಕ್ಕ ಕೊಡದಿದ್ದಾಗ ಆಗ ನಮ್ಮ ಬೆಸ್ಟ್ ಜಡ್ಜಮೆಂಟ್ ಟ್ಯಾಕ್ಸ್ ಹಾಕುವದು ಆದರೆ ಆ ರೀತಿಯಾಗಿ ಟ್ಯಾಕ್ಸ್ ಹಾಕಿದರೆ ಅವರಿಗೆ ಬಹಳನಾಗಿ ತೊಂದರೆಯಾಗುತ್ತದೆ. ರೈತರಿಗೆ ಅನುಕೂಲಮಾಡುವುದಕ್ಕೋಸ್ಕರ ಕಾಂಪೌಂಡಿಂಗ್ ಪ್ರಿನ್ಸಿಪಲ್ ಅನುಸರಿಸಬೇಕಾಗುತ್ತದೆ. ಇನ್ನು ಬಿದರ್ ಜಿಲ್ಲೆಯ ಸದಸ್ಯರ ಹೇಳಿದಂತೆ ಬೇರೆಬೇರೆ ಜಿಲ್ಲೆಗಳಲ್ಲಿ ಏನಾದರೂ ಈ ವಿಚಾರವ ಬಗ್ಗೆ ತೊಂದರೆಗಳಿದ್ದರೆ ಅವನ್ನೂ ಕೂಡ ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡು ಯಾವರೀತಿಯಲ್ಲಿ ನಿವಾರಿಸಬೇಕೆಂದು ಯೋಚನೆಮಾಡುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಹಾಗೆ ಅನೇಕ ಕಾನೂನುಗಳಿದ್ದರೂ ಕೂಡ ಕೆಲವಾರು ಕಾನೂನುಗಳು ಜಾರಿಯಲ್ಲಿ ಬರುತ್ತಿರಲಿಲ್ಲ. ಟ್ಯಾಕ್ಸೇಷನ್ ಕಾನೂನುಗಳಿದ್ದರೂ ಕೂಡ ಅವು ಅನುಷ್ಠಾನಕ್ಕೇ ಬರುತ್ತಿರಲಿಲ್ಲ. ಆದ್ದರಿಂದ ಈಗ ಈ ಕಾನೂನನ್ನು ಪ್ರಾಕ್ಟಿಕಲ್ಲಾಗಿ ಬದಲಾಯಿಸುವುದರಿಂದ ಯಾರಿಗೂ ತೊಂದರೆಯಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕಾಗುವುದಿಲ್ಲ. ಆ ರೀತಿಯಾದ ತೊಂದರೆಗಳಿದ್ದರೆ ಅವನ್ನೂ ಕೂಡ ಸ್ಪಷ್ಟಪಡಿಸುವುದಕ್ಕೆ ಮತ್ತು ಅದಕ್ಕೆ ಸರಿಯಾದ ಕ್ಲಾರಿಫಿಕೇಷನ್ ಕೊಡುವುದಕ್ಕೆ ಸೇಲ್ಸ್ ಟ್ಯಾಕ್ಸ್ ಅಡ್ವೈಸರಿ ಕಮಿಟಿಯಲ್ಲಿ ವಿಚಾರ ಮಾಡೋಣ. ಮಂಡ್ಯಾ ಜಿಲ್ಲೆಯಿಂದ ಬಂದಿರತಕ್ಕ ರೈತರ ಜೊತೆಯಲ್ಲಿ ಮಾತನಾಡಿ ಅವರ ಅನುಭವವನ್ನೂ ಕೂಡ ಪಡೆಯೋಣ. ರೈತರ ಪ್ರತಿನಿಧಿಗಳಲ್ಲಿಯೂ ವಿಚಾರವನ್ನು ಪರಿಶೀಲನೆಮಾಡೋಣ. ಈಗಾಗಲೇ ಕೆಲವು ವಿಚಾರಗಳಲ್ಲಿ ಅವರ ಜೊತೆಯಲ್ಲಿ ಚರ್ಚೆಮಾಡಿ ನ್ಯಾಯತೀರ್ಮಾನಕ್ಕೆ ಬಂದಿದ್ದೇವೆ,

ಶ್ರೀ ವಿ. ಎನ್. ಪಾಟೀಲ್ ನಮ್ಮ ಜೊತೆಯಲ್ಲಿ ಇನ್ನೂ ಚರ್ಚೆ ಮಾಡಲಿಲ್ಲವಲ್ಲಾ. ನಮ್ಮ ಸರ್ಕಾರ ಸ್ವಲ್ಪ ನೀತಿಯುಂಟಾಗಿ ಹೋಗುತ್ತಿದೆ. ಟ್ಯಾಕ್ಸ್ ಸರಿಯಾಗಿ ವಸೂಲು ಮಾಡುತ್ತಾ ಇಲ್ಲ.

SRI M. Y. GHORPADE.—We have some legal difficulties in colleting the tax in the present structure. So. the intention is to simplifyy the procedure so that the farmer is not harassed and we get, atleast a portion of the income that we ought to get. If Everybody pays Rs. 9 per tonne on the cane crushed on it own account, we welcome it. The question is whether he purchaeses the cane or not.

If he purchases the cane, then he is liable for purchasing tax; if he does not purchsae the cane, he is not liable for tax. Whether he purchases it for crushing, it is very easy to manipulate things.

ಶ್ರೀ ಕಾಗೋಡು ತಿಮ್ಮಪ್ಪ ;—ನಿಮ್ಮ ಹೃದಯ ಬಿಚ್ಚಿ ತೋರಿಸಿ ಆ ರೀತಿ ಈಗ ಇಲ್ಲವೆಂದು ಹೇಳುತ್ತೀರಾ ? ಪ್ರಮಾಣಕವಾಗಿ ಅದನ್ನು ಇನ್ನು ಮುಂದೆ ಕೇಳುವುದಿಲ್ಲವೆಂದು ಬೇಕಾದರೆ ಹೇಳಿ ಕ್ರಷ್ ಮಾಡುವುದಕ್ಕೆ ಮಿನಿಮಂ ಚಾರ್ಜ್ ಕೊಡಬೇಕಾಗುತ್ತದೆ.

SRI M. Y. GHORPADE.—In that case he can afford to pay this tax. After all this is a reduced rate of tax.

ಶ್ರೀ ಕಾಗೋಡು ತಿಮ್ಮಪ್ಪ ;—ಕೆಲವು ಯೂನಿಟ್‌ಗಳಲ್ಲಿ ಈಗಾಗಲೇ ವಸೂಲು ಮಾಡುತ್ತಿದ್ದಾರೆ. ಬೆಳೆದವನು 2 ಸಾವಿರ ರೂಪಾಯಿ ಸಂಪಾದನೆ ಮಾಡುವವನು 2 ಸಾವಿರ ರೂ. ತೆರಿಗೆ ಕೊಡಬೇಕೆಂದರೆ ಹೇಗೆ?

ಅಧ್ಯಕ್ಷರು ;—ರೂಲ್ಸ್ ಪ್ರಕಾರ ಬೆಳೆದವನು ಮಿನಿಮಂ ಚಾರ್ಜಸ್ ಕೊಡಲೇ ಬೇಕಾಗುತ್ತದೆಂದು ಉತ್ತರ ಹೇಳಿದ್ದಾರೆ.

SRI M. Y. GHORPADE.—The point is : even if he does not crush or this much he has crushed, he is free to render accounts not pay this tax by saying that he had not crushed. ಆ ಅಕೌಂಟ್ಸನ್ನು ಒಂದು ಪ್ರೊಫಾರ್ಮಾನಲ್ಲಿ ಕೊಡಬೇಕು. ಹೆಸರು, ವಿಳಾಸ, ಅವನು ಎಷ್ಟು ಕಬ್ಬನ್ನು ಕ್ರಷ್ ಮಾಡುತ್ತಾನೆಂಬುದನ್ನು ಲೆಕ್ಕ ಇಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ. ಪ್ರತಿಯೊಬ್ಬ ಕ್ರಷರ್ ಲೆಕ್ಕಗಳನ್ನು ಸರಿಯಾಗಿಡುವಷ್ಟು ಬುದ್ಧಿವಂತರಲ್ಲ. ಇವನಿಗೆ ಕ್ರಷ್ ಮಾಡುವ ವಿಚಾರ ಸರಿಯಾಗಿ ತಿಳಿದಿರಬೇಕು. Let them supply a proforma.

SRI M. Y GHORPADE.—The point is even this is too much, he can render account. It is only those people who are not prepared to render account for one reson or the other, we reaport to compounding principle. The sort of people he is talking about, he can honestly say that these are my account. Why should he not keep accounts A cane crusher will be a progressive farmer and he is an afflnent farmer Such a farmer is expected to keep an account. ಅವನಿಗೆ ಹಿಂಸೆ ಕೊಡುವ ಉದ್ದೇಶ ಸರ್ಕಾರಕ್ಕೆ ಎಳ್ಳಷ್ಟೂ ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನೀವು 10 ತರಹ ಅಕೌಂಟ್ಸ್ ಕೊಡಬೇಕೆಂದರೆ ಅವನು ಹೇಗೆ ಕೊಡಬೇಕು ?

SRI M.Y. GHORPADE.—When we are trying to tax all the farmers to say that the affluent farmer should not be touched at all, it is very difficult to accept it. I am prepared to say this much that if we change the procedure of collection through administrative rules to reduce the harassment. we are prepared to discuss it in the Sales Tax Advisory Committee. To say that we should not tax the farmer, will not be a fair proposition. I am prepared to take

in to account the genuine difficulties mentioned here and we can take care of them in some other way. This is only an additional facility. I want to emphasise here that we are not imposing anything new there is already a tax of Rs. 9 per tonne. This is only an additional facility to the former To save himself from the difficulties, he can accept to componding principal and not tender account ಮಾನ್ಯ ಶ್ರೀ ಮಂಜುನಾಥ ಅವರು ಭಾಷಣಮಾಡಿ ಹೊರಟುಹೋದರು. ನಾನಾ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ಪುನ: ಸ್ಪಷ್ಟವಾಗ ಹೇಳಬೇಕಾಗಿದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಾದೇನು ಕೋಸ್ರ ಮೇಲೆ ಹೆಚ್ಚು ತೆರಿಗೆಯನ್ನು ಹಾಕುತ್ತಾ ಇಲ್ಲ. ಕೆಲವು ಪದಾರ್ಥಗಳ ಮೇಲೆ ಮಾತ್ರ ತೆರಿಗೆಗಳನ್ನು ಜಾಸ್ತಿ ಮಾಡಿದ್ದೇವೆ. ಅದನ್ನೂ ಸಹ ಸೇಕಡ 3 ಇದ್ದುದನ್ನು ಸೇಕಡ 4 ರಷ್ಟು ಮಾತ್ರ ಮಾಡಿದ್ದೇವೆ. ಬಹು ಮುಖ್ಯವಾಗಿ ಐರನ್ ಅಂಡ್ ಸ್ಟೀಲ್. ಇದರಿಂದ ಸಮಗೆ ಒಂದು ಕೋಟಿ 70 ಲಕ್ಷ ರೂಪಾಯಿಗಳಷ್ಟು ಉತ್ಪನ್ನ ಬರುತ್ತಿದೆ. ಆದ್ದರಿಂದ ಈಗ ಸೆಂಟ್ರಲ್ ಸೇಲ್ ಟ್ಯಾಕ್ಸ್ ಜಾಸ್ತಿಯಾದಾಗ ನಾವೂ ಸಹ ಡಿಕ್ಲೇರ್ಡ್ ಗುಡ್ಸ್ ಮೇಲೆ ಜಾಸ್ತಿ ಮಾಡುವುದಕ್ಕೆ ಅಧಿಕಾರ ಬಂತು. ಈ ಅಧಿಕಾರವನ್ನು ಉಪಯೋಗಿಸಿಕೊಂಡು ಕೆಲವು ಡಿಕ್ಲೇರ್ಡ್ ಗುಡ್ಸ್ ಅಂದರೆ, ಐರನ್ ಅಂಡ್ ಸ್ಟೀಲ್, ಜೂಟ್, ಕೋಲ್ ಪದಾರ್ಥಗಳ ಮೇಲೆ ನಾವು 4 ಪರ್ಸೆಂಟ್ ಏರಿಸುತ್ತಿದ್ದೇವೆ. ಕೋಪ್ರ ಮೇಲೆ ಇನ್ನೂ ಸೇಕಡ 3ರಷ್ಟೇ ಇದೆ. ಅದನ್ನು ಇನ್ನೂ ಏರಿಸಿಲ್ಲ. ಕೆಲವು ಪದಾರ್ಥಗಳಿಗೆ ಮಾತ್ರ ತೆರಿಗೆ ಏರಿಸಲಾಗಿದೆ. ಅದಕ್ಕಾಗಿ ಕ್ಲಾಜು 6 (ಬಿ) ಯನ್ನು ಈಗಲೇ ವಾಪಾರ್ಟು ಮಾಡಬೇಕಾಗಿಲ್ಲ. ಆ ರೀತಿ ಮಾಡಿದರೆ ಬಹಳ ತೊಂದರೆಯಾಗುತ್ತದೆ. 10 ಲಕ್ಷಕ್ಕಿಂತ ಜಾಸ್ತಿ ಟರ್ನ್ ಓವರ್ ಇದ್ದರೆ ಸೇಕಡ 10ರಷ್ಟು ತೆರಿಗೆ ಬೀಳುತ್ತದೆ. ಮೊದಲು ಇದೂ ಸಹ ಸೇಕಡ 3ಕ್ಕಿಂತ ಜಾಸ್ತಿ ಇರಬಾರದೆಂದಿತ್ತು. We have already raised the tax on iron and steel and jute to 4 percent Consequent on the increase in the C. S. T. As a matter of fact, we have not raised tax on cotton seeds, groundnuts and other oil seeds. though we can raise it to 4 persent. In some of our neighbouring States the tax on such articles is 4 percent. In our our State, the tax on cotton yarn is 1 ½ and 3 percent on cott n cotton seeds, and ground nuts. Even on hydes and skins we have 2 percent whereas in other States the tax is 4 percent. On some of the articles which required by the ryots we have not raised the tax. For example-iron and steel, jute and coal.

SRI V. N. PATIL.—Jute is mostly used by the ryots.

SRI M. Y. GHORPADE.—That we have already passed,

MADAM SPEAKER.—I will put the consideration motion to the vote of the House. The question is:

"That the Karnataka Sales Tax (Fourth Amendment) Bill 1975 be taken into consideration"

*The motion was adopted.*

CLAUSES 2 to 4

MADAM SPEAKER.—As there are no amendment I will put Clause 2 to 4 to the vote of the House. The question is; "That Clauses 2 to 4, both inclusive, do stand part of the Bill,"

*The motion was adopted.*

Clauses 2 to 4 both inclusive, were added to the Bill,

CLAUSES 1 ETC.,

MADAM SPEAKER.—The question is ;

"That Clause 1, the longs title and the preamble with Enating formula do stand part of the Bill."

*The motion was adopted*

Clause 1, the long title and the Preamble with Enating formula were added to the Bill,

*Motion to pass*

SRI M.Y. GHORPADE.—Sir, I move:

"That the Karnataka Sales Tax (Fourth Amendment) Bill 1975, be passed "

MADAM SPEAKER —The question is ;

"That the Karnataka Sales Tax (Fourth Amendment) Bill 1975 be passed."

*The motion was adoped and the Bill was passed.*

*Mmotion to consider*

SRI M. Y. GHORPADE.—Sir, I move ;

That the Karnataka Sales Tax (Amendment) Bill 1976 be taken into consideration."

MADAM SPEAKER —Motion moved The question is ;

"That the Karnataka (Sales) Tax (Amendment) Bill 1976 be taken into consideration "

MR. DEPUTY SPEAKER IN THE CHAIR

SRI M. Y. GHORPADE —Mr. Deputy Speaker, Sir, this is a very simple Bill. The main idea of this Bill is to facilitate collection of tax by clarifying certain terms and here by remove certain difficulties in tax collection. For instance-the scope of the term "business" which has now been specifically made to include incidental or ancilliary to regular business This enables the Government to collect the tax on scrap materials which are produced by factories like Hindustan Aircraft, Indian Telephone Industries and Bharath Electronic to., So also the 'Dealer' is specified to include Central Government departments such as Central Excise and Rail

ways. This also enables us to collect the tax on scrap materials of Railways and some other commodities pertaining to Central Excise Department.

The other object is to include the saw-miller in the definition of 'miller' The miller is supposed to register under the definition of Miller, The saw Miller is specifically included in the defiuition of the Miller so that they are also expected to be registred. On component parts the tax is being raited from 2 to 3 percent. The tax on component part has been 2 percent since a very long time. There is no reason why it should be only 2 percent and not brought to 3 percent which is the normal tax in the neighbouring State also. Therefore, the tax on component parts is raised from 2 to 3 percent All these do not get much revenue The increase in revenue from these amendments may not be more than Rs. 10 lakhs All the same the amendment is worth making in order to facilitate the tax colle ction and also collection of tax on come components. Here, also we have made provision in this Bill to the publication of the names of the tax defaulters. Such a provision exists in the Income Tax Act,

ಶ್ರೀ ಕಾಗೋಡು ತಿಮ್ಮಪ್ಪ.—ಪಬ್ಲಿಶ್ ಮಾಡುವುದರಿಂದ ಏನು ಪ್ರಯೋಜನ ?

ಶ್ರೀ ಎಂ. ವೈ. ಘೋರ್ಪಡೆ.—ದಿ ರೀತಿ ಪಬ್ಲಿಶ್ ಮಾಡುವುದರಿಂದ ಸ್ವಲ್ಪ ಪರಿಣಾಮ ಉಂಟಾಗುತ್ತದೆ. ಆ ರೀತಿ ಗೆಜೆಟ್‌ನಲ್ಲಿ ಪಬ್ಲಿಷ್ ಮಾಡಿದರೂ ಏನೂ ಆಗದಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಬೇರೆ ಇನ್ನು ಯಾವುದಾದರೂ ಮಾರ್ಗವನ್ನು ಹಿಡಿಯಬೇಕಾಗುತ್ತದೆ. Certain amendments are these because of Court desision. For example-the toilet article is very interesting thing wherein the Supreme Court held that the toilet should not be tax on multi-point but could be taxed like brushes and combs etc., We have made certain amendments taking into account the Supreme Court's decisions on these matters like shaving Brushes, Combs etc From 22-8-1972, some of there toilet articles will be taxed at 10./ single point but they are treated as multi-point upto 22-8 1972. In view of the Court's decisions, we had to make these amendments: As regards food articles, the section has been amended consequent to the Court's decisions. Easlier, if food articles are packed in some bags say polythene bags, they would escape tax. Now, as a result of Court's decision, it would attract even though it is pecked in polythene bags. In this amendment, we have therefore used the expression "Tinned, Canned and bottled, foods and fruits including foods and fruits packed in sealed containers", Similarly, butter, Ghee and Chese packed in ploythen bags will not be able to escape tax on account of this amendment.

Therefore, these amendments are made mainly to make the definitions, sharper and see that, take into account Court's decisions, people are not able to evade tax and the only increase of tax is on component parts i. e., from 2./· to 3,/· which is long due As I said, this is not a revenue measure but only to enable to improve the efficiency of the tax eollection and as a result of these changes, the increased in revenue may be of the order of only Rs. 10 lakhs.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯಸಭಾಧ್ಯಕ್ಷರೆ, ಇದು ನಮ್ಮ ಮುಂದೆ ಮಂಡಿಸಿರತಕ್ಕ ಈ ಮಸೂದೆ ಭಾಗಶಃ ವಿರೋಧಿಸಬೇಕಾಗುತ್ತದೆ, ಇದರಲ್ಲಿ ಕೆಲವು ಅಂಶಗಳು ಮಾತ್ರ ಬಹಳ ಸ್ವಾಗತಾರ್ಹವಾದುವು, ಆದರೆ ಅನೇಕ ವಿಷಯಗಳು ಜನಗಳ ಮೇಲೆ ಹೆಚ್ಚಿಗೆ ತೆರಿಗೆ ಹೊರಿಸತಕ್ಕ ಮಸೂದೆಯಾಗಿರುವುದರಿಂದ ಇದನ್ನು ವಿರೋಧಿಸಬೇಕಾಗಿದೆ. ಇಲ್ಲಿ ವ್ಯಾಪಾರ ಎನ್ನುವಾಗ......

> "it includes any tra e, commerce or any adventure or concern in the nature of trade or commerce with or without profit motive in such trade, commerce, adventure or concern."

ಇದರಲ್ಲಿ ಬಿಸಿನೆಸ್ ಎನ್ನುವುದನ್ನು ಡಿಫೈನ್ ಮಾಡಿದ್ದಾರೆ. ಇದರಲ್ಲಿ ಒಂದು ಅಂಶ ಸೇರಿಸಿದ್ದರೆ ಅನುಕೂಲವಾಗುತ್ತಿತ್ತು ಎಂದು ಹೇಳುತ್ತೇನೆ- ಏಕೆಂದರೆ ಈ ವ್ಯಾಪಾರದಲ್ಲಿ ಮಧ್ಯೆ ದಳ್ಳಾಳಿಗಳು ಏನು ಇರುತ್ತಾರೆ ಅವರು ಯಾವ ಒಂದು ಲೆಕ್ಕ ಇಟ್ಟಿರುವುದಿಲ್ಲ. ಅಂತಹವರು ಅನೇಕರು ಹಣ ಸಂಪಾದನೆ ಮಾಡುತ್ತಿದ್ದಾರೆ, ಅಲ್ಲದೇ ಅವು ಈ ಒಂದು ಟಾಕ್ಸ್ ಅವಾಯ್ಡ್ ಮಾಡಿಕೊಳ್ಳುತ್ತಿದ್ದಾರೆ. ಇವರು ಏನು ಮಾಡುತ್ತಿದ್ದಾರೆ ಎಂದು ನೋಡುವುದಾದರೆ ಈ ಪರ್ಚೇಸಿಂಗ್ ಏಜೆಂಟಗಳು ಭತ್ತ, ಮೆಣಸಿನಕಾಯಿ, ಕಡಲೆಬೀಜ ಇವುಗಳನ್ನೆಲ್ಲಾ ಆಯಾಯ ಸ್ಥಳಗಳಲ್ಲಿ ಪರ್ಚೇಸ್ ಮಾಡಿ ಪಟ್ಟಣಗಳಿಗೆ ಕಳುಹಿಸುತ್ತಾರೆ, ಅವರು ಕಳುಹಿಸುವಾಗ ಅನೇಕ ಸಂದರ್ಭದಲ್ಲಿ ಪರ್ಸೆಂಟೇಜ್ ಕಡಿಮೆ ಇರುತ್ತದೆ, ಇಲ್ಲಿ ಅದರ ವ್ಯಾಪಾರವಾದನಂತರ ಅದರ ಲಾಭವನ್ನು ಪಡೆಯುತ್ತಾರೆ. ಇದರಿಂದ ಒಬ್ಬ ಪರ್ಚೇಸಿಂಗ್ ಏಜೆಂಟಗೆ ಒಂದು ತಿಂಗಳಿಗೆ ಸುಮಾರು 5–6 ಸಾವಿರ ರೂಪಾಯಿ ವರಮಾನ ಪಡೆಯುತ್ತಾನೆ. ಅದರಿಂದ ಈ ಒಂದು ಬಿಸಿನೆಸ್ ಅನ್ನತಕ್ಕದ್ದರಲ್ಲಿ ಈ ಒಂದು ಮಿಡಲ್‌ಮೆನ್ ಏನು ಇದ್ದಾರೆ ಅವರನ್ನು ಸೇರಿಸಿಕೊಂಡರೆ ಬಹಳ ಅನುಕೂಲವಾಗುತ್ತದೆ ಎಂದು ಅನಿಸುತ್ತದೆ ಏಕೆಂದರೆ ಈ ಮಿಡ್‌ಲ್‌ಮೆನ್‌ಗಳು ವ್ಯಾಪಾರ ಮಾಡುವಾಗ ಹೆಚ್ಚು ಲಾಭದ ಹೊರೆಯನ್ನು ಕಂಸ್ಯೂಮರ್ಸ್ ಮೇಲೆ ಹಾಕುತ್ತಾರೆ. ಇದರಿಂದ ಕಂಸ್ಯೂಮರ್ಸ್‌ಗೆ ತೊಂದರೆಯಾಗುತ್ತದೆ ಎಂದು ನನ್ನ ಅಭಿಪ್ರಾಯ. ಇನ್ನು ಇಂದಿನ ಮಸೂದೆಯಲ್ಲಿ ಸಾಮಿಲ್ ಸೇರಿಕೊಂಡು ಮಾಡಿದ್ದಾರೆ ಮೊದಲು ಈ ಸಾಮಿಲ್ಲುಗಳಲ್ಲಿ ಒಂದು ಘನ ಅಡಿ ಮರ ಕೊಯ್ಯುವುದಕ್ಕೆ 75 ಪೈಸೆ ಇದ್ದುದು, ಇವೊತ್ತು ಒಂದು ಘನ ಅಡಿ ಮರ ಕೊಯ್ಯಬೇಕಾದರೆ 2 ರೂಪಾಯಿ 50 ಪೈಸೆಯಿಂದ 3 ರೂಪಾಯಿವರೆಗೆ ಮಾಡಿದ್ದಾರೆ. ಈ ರೀತಿ ಸಣ್ಣ ಪುಟ್ಟವುಗಳಿಗೆ ಎಲ್ಲಾ ಟ್ಯಾಕ್ಸ್ ಹಾಕಿದರೆ ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಈಗ 2 ರಿಂದ 3 ಪರ್ಸೆಂಟಿಗೆ ಹೆಚ್ಚಿಸಿದೆ ಎಂದು ಸೆಕ್ಷನ್ 5ರಲ್ಲ ಹೇಳಿವೆ. ತಾವು 2 ರಿಂದ 3 ಪರ್ಸೆಂಟ್ ಎಂದು ಸುಲಭವಾಗಿ ಹೇಳುತ್ತೀರಿ. ಆದರೆ ಮೊದಲು ನಮ್ಮ ಕಾರ್ಪೊರೇಷನ್‌ನಲ್ಲಿ ಒಂದು ತೆಂಗಿನ ಕಾಯಿಗೆ 1 ಕಾಸ ಟ್ಯಾಕ್ಸ್ ಇದ್ದುದನ್ನು, ಒಂದು ಪೈಸೆ ಎಂದು ಮಾಡಿದ್ದಕ್ಕೆ ಸುಮಾರು ಒಂದೂವರೆ ಲಕ್ಷ ರೂಪಾಯಿ ಹೆಚ್ಚು ವರಮಾನ ಬಂತು. ತಾವು ಈ ರೀತಿ ಸಣ್ಣ ಸಣ್ಣ ತೆರಿಗೆ ಹೆಚ್ಚಿಸಿಕೊಂಡು ಹೋದರೆ ಜನ ಆಹಾರ ಬೆಲೆಗಳು ಜಾಸ್ತಿಯಾಗಿ ಬಡವರಿಗೆ ಬಹಳ ತೊಂದರೆಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಬಡ್ಜೆಟ್ ಬರುವುದಕ್ಕೆ ಮುಂದೆ ಈ ರೀತಿ ಟ್ಯಾಕ್ಸ್ ಹೇಳುತ್ತೀರಿ, ಇನ್ನು ಬಡ್ಜೆಟ್ ಬಂದಮೇಲೆ ಯಾವರೀತಿ ಟ್ಯಾಕ್ಸ್ ಬೀಳುತ್ತದೆಯೋ ಗೊತ್ತಿಲ್ಲ. ಈ ಸೇಲ್ಸ್ ಟ್ಯಾಕ್ಸ್ ಬಿಲ್ಲು ಪ್ರತಿ ವರ್ಷವು ಒಂದು ಹತ್ತಾದರೂ ಇದ್ದೇ ಇರುತ್ತವೆ. ತಾವು ತಜ್ಞರಾಗಿರುವುದರಿಂದ ಇದು ಜನಸಾಮಾನ್ಯರಿಗೆ ಬೀಳತಕ್ಕ ಹೊರೆಯಲ್ಲ ಎಂದು ಹೇಳುವ ಸಾಮರ್ಥ್ಯ

ನಿಮ್ಮಲ್ಲಿ ಇದೆ. ಈಗ ಬ್ಯಾಂಕ್ ರೇಟ್ ಆಫ್ ಇಂಟರೆಸ್ಟ್ ನೋಡಿದರೆ 18 ರಿಂದ 21 ಪರ್‌ಸೆಂಟ್ ವರೆಗೆ ಆಗಿದೆ, ಸೇಲ್ಸ್ ಟ್ಯಾಕ್ಸ್ 15 ರಿಂದ 20 ಪರ್‌ಸೆಂಟ್ ಈ ರೀತಿ ಪ್ರತಿಯೊಂದು ಸಾರಿಯೂ ಸೆಂಟ್ರಲ್ 'ಗೌರ್ನಮೆಂಟ್' ಏರಿಸುತ್ತಿದ್ದರೆ, ಜನಸಾಮಾನ್ಯರು ಕೊಳ್ಳುವ ಪದಾರ್ಥಗಳ ಬೆಲೆ ಯಾವರೀತಿಯಲ್ಲಿ ಇರುತ್ತವೆ ಎನ್ನುವುದನ್ನು ನೋಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ರಮ್ಮು, ಜಿನ್, ಇವುಗಳ ಬಗ್ಗೆ ಡಿಫೈನ್ ಮಾಡುತ್ತಾ ಹೇಳಿದಿರಿ ಅದರ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ನನ್ನ ಅಭ್ಯಂತರವಿಲ್ಲ, ಅವರ ಮೇಲೆ ಟ್ಯಾಕ್ಸ್ ಹಾಕಿದರು ನಾನು ಅದಕ್ಕೆ ವಿರೋಧಮಾಡುವುದಿಲ್ಲ ಅದರ ಮೇಲೆ ಟ್ಯಾಕ್ಸ್ ಹಾಕುವುದು ಬಹಳ ಸ್ವಾಗತಾರ್ಹ ಎಂದು ನಾನು ಕುಡಿಯದೇ ಇರುವವರ ಪರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕ್ಷನ್ 29ರಲ್ಲಿ ಹೇಳಿರುವ ಬಗ್ಗೆ, ತಪ್ಪು ಲೆಕ್ಕ ಕೊಟ್ಟರೆ, ಶಿಕ್ಷೆ ವಿಧಿಸತಕ್ಕದ್ದರ ಬಗ್ಗೆ ಕೆಲವು ವಿವರಣೆ ಇದೆ. ಇಂತಹವರ ಮೇಲೆ ಉಗ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಈಗ ತೆರಿಗೆ ವಸೂಲಿ ಕ್ರಮ ಹೇಳುವುದಾದರೆ, ಈಗ ಸರಿಯಾದ ರೀತಿಯಲ್ಲ ಅಕ್ರಮಾಯಿ ತೆರಿಗೆ ವಸೂಲು ಮಾಡದ್ದೇ ಆದರೆ, ಕನಿಷ್ಟಪಕ್ಷ 50 ಲಕ್ಷ ರೂಪಾಯಿ ಹೆಚ್ಚಿಸಬಹುದು ಎಂದು ಹೇಳುತ್ತೇನೆ. ಈಗ ಹೇಳುವುದಾದರೆ ಈ ತಪ್ಪು ಲೆಕ್ಕ ಇಡುವುದಕ್ಕೆ ಅವಕಾಶ ಕೊಡತಕ್ಕ ಕಾರ್ಯಕರ್ತರು ನಿಮ್ಮ ಇಲಾಖೆಯ ಅಧಿಕಾರಿಗಳು. ಈಗ ಪ್ರೋಸೆಸ್ ಸರ್ವರ್‌ಯಿಂದ ಹಿಡಿದು ದೊಡ್ಡ ಅಫೀಸರ್‌ವರೆಗೆ ಮಾಮೂಲು ಕೊಡುವಂತ ಪದ್ಧತಿ ಇರುವುದರಿಂದ ಅನೇಕರು ಟ್ಯಾಕ್ಸ್ ತಪ್ಪಿಸಿಕೊಳ್ಳುತ್ತಿದ್ದಾರೆ. ಈ ಸ್ಟೇಟ್‌ಮೆಂಟ್ ತೆಗೆದುಕೊಂಡಾಗ ಹಾಗೆ ಫೈಲ್ ಮಾಡುವಾಗ ಏನು ಕೊಡಬೇಕೋ ಅದನ್ನು ಕೊಟ್ಟರೆ ಅವನ್ನು ಒಪ್ಪಿಕೊಂಡು ಕಳುಹಿಸುತ್ತಾರೆ. ಅದು ಬಾರದೇ ಇದ್ದರೆ ಒಂದಲ್ಲ ಒಂದು ರೀತಿಯಿಂದ ಕೊಕ್ಕೆ ಹಾಕಿ ವಸೂಲುಮಾಡುತ್ತಾರೆ. ಆದ್ದರಿಂದ ಇಂತಹವರ ಬಗ್ಗೆ ತಾವು ಯಾವರೀತಿಯಿಂದ ಉಗ್ರಕ್ರಮ ತೆಗೆದುಕೊಳ್ಳುತ್ತೀರಾ. ಎನ್ನುವುದನ್ನು ವಿವರಣೆ ಮಾಡಿದರೆ ಉತ್ತಮ ಎಂದು ಕಾಣಿಸುತ್ತದೆ. ಈಗ ಟ್ಯಾಕ್ಸ್‌ನಿಂದ ಹುಲುಸಾಗಿ ಹಣ ಬರುತ್ತದೆ ಎಂದು ಮಾಡುವುದಕ್ಕೆ ಹೋದರೆ, ಬೇಲಿ ಎದ್ದು ಹೊಲ ಮೇಯುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅನೇಕ ಸಾರಿ ಇದರ ಬಗ್ಗೆ ಚರ್ಚೆಯು ಸಹ ನಡೆದಿದೆ. ಈಗ ಲೆಕ್ಕ ಪತ್ರ ಇಡುವುದರಲ್ಲಿ ಸರಿಯಾಗಿ ಇಲ್ಲದಿದ್ದರೆ ಕ್ರಮ ತೆಗೆದು ಕೊಳ್ಳಬೇಕು. ಅಲ್ಲದೇ ಹೆಚ್ಚಾಗಿ ತೆರಿಗೆ ವಸೂಲಾಗತಕ್ಕಂಥ ಜಾಗದಲ್ಲ ಒಳ್ಳೆಯ ನಿಷ್ಠೆಯಿಂದ ಕೆಲಸ ಮಾಡತಕ್ಕವರನ್ನು ಹಾಕಬೇಕೆಂದು ಹೇಳುತ್ತೇನೆ. ಕೆಲವು ಸಂದರ್ಭಗಳಲ್ಲಿ ಏನಾಗುತ್ತದೆ ಎಂದರೆ ಕೆಲವು ಮುಖ್ಯವಾದ ಜಾಗಗಳಿಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವುದಕ್ಕೆ ಸುಮಾರು 30 ರಿಂದ 40 ಸಾವಿರ ರೂಪಾಯಿವರೆಗೆ ಖರ್ಚು ಮಾಡುತ್ತಾರೆ ಎಂದು ನನಗೆ ನಂಬಿಕೆ ಇರತಕ್ಕವರ ಕಡೆಯಿಂದ ತಿಳಿದು ಬಂದಿದೆ,

ಆದುದರಿಂದ, ಬಹಳ ಹೆಚ್ಚು ತೆರಿಗೆ ಬರತಕ್ಕ ಜಾಗಗಳಲ್ಲಿ ಆದಷ್ಟು ನ್ಯಾಯವಾಗಿ ಕೆಲಸ ಮಾಡುವವರನ್ನು ಹಾಕಬೇಕೆಂದು ಸಲಹೆ ಮಾಡುತ್ತೇನೆ.

4–00 P.M.

ಇನ್ನು, "ಟಿನ್ಡ್, ಕೇನ್ಡ್, ಅಂಡ್ ಬಾಟ್ಲ್ಡ್, ಫುಡ್ಸ್ ಅಂಡ್ ಫ್ರೂಟ್ಸ್........" ಎಂದು ಇದೆ. ಅನೇಕ ಬಡವರ ಮನೆಗಳಲ್ಲಿ ಇವತ್ತಿಗೂ ಕೆಲವು ಪಾನೀಯಗಳನ್ನು ಕೊಡುವುದು ಉಂಟು. ನಿಂಬೆ ಹಣ್ಣು ಸಿಕ್ಕದೇ ಇರುವಾಗ, ಬಾಟಲ್ಡ ಇರತಕ್ಕ ಯಾವುದಾದರೊಂದು ಪಾನೀಯ ಕೊಡುವುದು ಉಂಟು. ಆದುದರಿಂದ, ಇದು ಒಂದು ಅವಶ್ಯಕ ವಸ್ತು, ಮತ್ತು ಇದು ಜನಸಾಮಾನ್ಯರು ಉಪಯೋಗಿಸುವ ವಸ್ತು, ಇದರ ಬಗ್ಗೆ ತೆರಿಗೆ ಹಾಕುವಾಗ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು, "ಬಟರ್ ಘೀ ಅಂಡ್ ಚೀಸ........" ಎಂದು ಇದೆ. ಕೆಲವು ಬಜಾರ್‌ಗಳಲ್ಲಿ ಆರ್. ಜಿ. ತುಪ್ಪ, ಮುಂತಾದ ಹೆಸರುಗಳಿಂದ ತುಪ್ಪವನ್ನು ಮಾರುತ್ತಿದ್ದಾರೆ, ಇವೆಲ್ಲಾ ಮನುಷ್ಯನ ಆರೋಗ್ಯಕ್ಕೆ ಬಹಳ ಕೆಡಕನ್ನುಂಟು ಮಾಡುವ ತುಪ್ಪಗಳಾಗಿವೆ. ತುಪ್ಪದ ಲೆಕ್ಕಕ್ಕೂ ಬರುವುದಿಲ್ಲ; ಎಣ್ಣೇ ಲೆಕ್ಕಕ್ಕೂ ಬರುವುದಿಲ್ಲ.—ಈ ತುಪ್ಪ. ಇನ್ನೂ ಏನೇನೋ ಸೇರಿಸಿ, ಅದನ್ನು ತುಪ್ಪ ಎಂದು ಮಾರುಕಟ್ಟೆಯಲ್ಲಿ ಮಾರುವುದೂ ಉಂಟು. ಆದುದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಪೂರ್ಣ ವ್ಯಾಖ್ಯಾನ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಟೂಥ್ ಪೇಸ್ಟ್, ಶೇವಿಂಗ್ ಬ್ರಷ್ ಮತ್ತು ಕೂಂಬ್ಸ್ ಇವುಗಳು ಟಾಯಿಲೆಟ್ಸ್‌ಗೆ ಸೇರುವುದಿಲ್ಲ ಎಂದು ಹೇಳಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಪ್ರತಿದಿನ ಬೆಳಗಾದರೆ ಇವುಗಳನ್ನು ಉಪಯೋಗಿಸುವುದರಿಂದ, ಇದರ ಮೇಲೆ ತೆರಿಗೆ ತೆಗೆಯತಕ್ಕದ್ದು ಶ್ಲಾಘನೀಯ. ಆದರೆ, ಅನೇಕರು ಟಾಯ್ಲೆಟ್‌ಗೆ ಸೋಪ್‌ನ್ನು ಉಪಯೋಗಿಸುತ್ತಿದ್ದಾರೆ. ಹಿಂದೆ ಹೆಚ್ಚು ಹೆಚ್ಚಾಗಿ ಸಿಗೇಕಾಯಿಂದ ಮೈಯನ್ನು ಉಜ್ಜಿಕೊಳ್ಳುತ್ತಿದ್ದರು. ಈಗ ಸೋಪನ್ನು ಉಪಯೋಗಿಸುವ ಸಂದರ್ಭಗಳು ಇವೆ.

ಇನ್ನು ಫ್ಯೂಯಲ್ ಇದರ ಬೆಲೆ ಜಾಸ್ತಿಯಾಗುತ್ತಾ ಇರುವ ಕಾಲದಲ್ಲಿ, ಅದರ ಮೇಲೆ ಇನ್ನೂ ಹೆಚ್ಚು ತೆರಿಗೆ ಹಾಕುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ವಿಚಾರ ಮಾಡಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಹಾಸ್ಟೆಲುಗಳಿಗೆ ರಿಯಾಯತಿ ತೋರಿಸಲಾಗಿದೆ. ಇದರಿಂದ, ಹಾಸ್ಟೆಲುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ರಿಯಾಯತಿ ತೋರಿಸಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆದುದರಿಂದ, ಇದರಲ್ಲಿ ಎಲ್ಲೆಲ್ಲಿ ತೆರಿಗೆಗಳನ್ನು ಹೆಚ್ಚು ಹಾಕಿದ್ದಾರೆ ಅವುಗಳೆಲ್ಲವನ್ನು ವಿರೋಧಿಸಿ- ಜನಸಾಮಾನ್ಯರಿಗೆ ಅನುಕೂಲವಾಗತಕ್ಕ ಅಂಶಗಳು ಎಲ್ಲೆಲ್ಲಿ ಇವೆ ಅವುಗಳಿಗೆಲ್ಲಾ ನನ್ನ ಬೆಂಬಲವನ್ನು ಕೊಟ್ಟು, ಹೀಗೆ ಸರ್ಕಾರದವರು ಹೆಚ್ಚು ಹೆಚ್ಚು ತೆರಿಗೆ ಹಾಕುವುದನ್ನು ಕಡಮೆ ಮಾಡಿ, ಲೂಪ್‌ಹೋಲ್ಸನ್ನು ಬ್ಲಾಕ್ ಮಾಡಿ, ಅನಂತರವೇನಾದರೂ ಅವಶ್ಯವಿದ್ದರೆ, ತೆರಿಗೆ ಹಾಕಬೇಕೆಂದು ಹೇಳಿ, ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಉಪಾಧ್ಯಕ್ಷರೇ, ಈ ವಿಧೇಯಕದಲ್ಲಿ ಅಂಥಾ ಮುಖ್ಯವಾದ ಪ್ರಶ್ನೆಗಳೇನೂ ಅಡಕವಾಗಿಲ್ಲ ಎಂದು ವಿಧೇಯಕವನ್ನು ಮಂಡಿಸುವಾಗಲೇ ಹೇಳಿದ್ದೇನೆ. ಇದರಲ್ಲಿ 'ಬಿಸಿನೆಸ್' ಎಂಬ ಪದಕ್ಕೆ ವ್ಯಾಖ್ಯಾನವನು ಕೊಟ್ಟಿದ್ದೇವೆ. ಮತ್ತು ಹೆಸರುಗಳನ್ನು ಪಬ್ಲಿಷ್ ಮಾಡುವ ಅಧಿಕಾರವೂ ಇದರಲ್ಲಿ ಇದೆ. ಇದರ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ಭಾವಿಸಿದ್ದೇವೆ. ಹಾಗೆಯೇ ''ಕಂಟೇನರ್ಸ್'' ಪದಕ್ಕೂ ವ್ಯಾಖ್ಯಾನ ಕೊಟ್ಟು, ಅದನ್ನು ಇನ್ನೂ ಸ್ಪಷ್ಟಮಾಡಿದೇವೆ. ಇಲ್ಲದೇ ಹೋದರೆ, ಕಲವು ಪದಾರ್ಥಗಳು ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದವು. ಪಾಲಿಥಿನ್ ಬ್ಯಾಗ್‌ಗಳ ಮೇಲೂ ಕೂಡ ತೆರಿಗೆ ಹಾಕಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇನ್ನು ಟಾಯಲೆಟ್ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದೇವೆ. ಈಗ ಇರುವ ವ್ಯವಸ್ಥೆ ಪ್ರಕಾರ 6 ಪರ್ಸೆಂಟ್ ಕನ್ಸೆಸನ್ ರೇಟನ್ನು ಸೋಪುಗಳಿಗೆ ಕೊಟ್ಟಿದೆ. ಇದು ಲಕ್ಷುರಿ ಸೋಪಲ್ಲ; ಸ್ನಾನಕಾಗಿ ಉಪಯೋಗಿಸುವುದು ಎಂದು ತಿಳಿದು ಈ ರಿಯಾಯಿತಿಯನ್ನು ಕೊಟ್ಟಿದೆ. ಈಗ ಅದನು ಜಾಸ್ತಿ ಮಾಡುತ್ತಿದ್ದೇವೆ. ಇನ್ನು ಶೇವಿಂಗ್ ಸೋಪ್ ಬಗ್ಗೆ ವ್ಯಾಖ್ಯಾನವನ್ನು ಸ್ಪಷ್ಟಪಡಿಸಲಾಗಿದೆ. ಅದಕ್ಕೆ 10 ಪರ್ಸೆಂಟ್ ತೆರಿಗೆಯನ್ನು ವಿಧಿಸಲಾಗಿದೆ.

ಇನ್ನು, ಎಕ್ಸ್‌ರೇ ಸಾಮಾನುಗಳು ಹಾಗೂ ಫಿಲ್ಮ್ ಬಿಟ್ಟುಹೋದ್ದವು. ಈಗ ಅವುಗಳನ್ನೂ ಕೂಡ ಸೇರಿಸಿದೆ.

ಶ್ರೀ ಟಿ. ಆರ್. ಶಾಮಣ್ಣ.—ಸರ್ಕಾರಿ ಆಸ್ಪತ್ರೆಗಳಲ್ಲಿ ಅನೇಕ ಸಂದರ್ಭಗಳಲ್ಲಿ ಫಿಲಂ ಚೆನ್ನಾಗಿದ್ದರೆ, ಪ್ಲಾಂಟ್ ಚೆನ್ನಾಗಿರುವುದಿಲ್ಲ, ಪ್ಲಾಂಟ್ ಚೆನ್ನಾಗಿದ್ದರೆ ಫಿಲಂ ಇರುವುದಿಲ್ಲ. ಅಂಥಾ ಪರಿಸ್ಥಿತಿ ಇವತ್ತಿನ ದಿವಸ ಇದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಈ ತೊಂದರೆಯಿರುವುದರಿಂದ, ಜನಸಾಮಾನ್ಯರು ಖಾಸಗೀ ಆಸ್ಪತ್ರೆಗಳಿಗೆ ಹೋಗಬೇಕಾಗಿ ಬರುತ್ತದೆ. ಆದುದರಿಂದ, ಎಕ್ಸ್‌ರೇ ಸಾಮಾನುಗಳು ಹಾಗೂ ಫಿಲಂಗಳನ್ನು ಮನುಷ್ಯನ ಕಾಯಿಲೆ ಕಂಡುಹಿಡಿಯುವ ಬಗ್ಗೆ ಉಪಯೋಗಿಸುವುದರಿಂದ, ಇದೂ ಕೂಡ ಜನಸಾಮಾನ್ಯರ ಅತ್ಯವಶ್ಯಕ ವಸ್ತುಗಳಲ್ಲೊಂದಾಗುತ್ತದೆ. ಆದುದರಿಂದ, ಇದರ ಮೇಲೆ ಕೂಡ ತೆರಿಗೆಯ ಹೊರೆಯನ್ನು ಹೆಚ್ಚು ಮಾಡತಕ್ಕದ್ದು ನ್ಯಾಯವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುವರೆ ?

ಶ್ರೀ ಎಂ. ವೈ. ಘೋರ್ಪಡೆ.—ಎಕ್ಸ್‌ರೇ ಎಕ್ವಿಪ್‌ಮೆಂಟ್ ಮೇಲೆ ತೆರಿಗೆ ಹಾಕಿದ್ದೇವೆ. ಆದರೆ, ಎಕ್ಸ್‌ರೇ ಫಿಲಂಸ್ ಬಗ್ಗೆ ಅಷ್ಟು ಸ್ಪಷ್ಟವಾಗಿ ವ್ಯಾಖ್ಯಾನವಿರಲಿಲ್ಲ ಎಕ್ಸ್‌ರೇ ಎಕ್ವಿಪ್

ಮೆಂಟ್‌ಗೆ ತೆರಿಗೆ ಹಾಕಿದಾಗ, ಅದರ ವ್ಯಾಪ್ತಿಯೊಳಗೆ ಬರುವ ಮತ್ತು ಅದಕ್ಕೆ ಉಪಯೋಗಿಸುವ ಫಿಲಂಗಳ ಮೇಲೂ ತೆರಿಗೆ ಹಾಕಬೇಕೆನ್ನುವ ವಿಚಾರವಿದೆ. ಆದುದರಿಂದ, ಎಕ್ಸ್‌ರೇಸ್ ಫಿಲಂಸ್‌ನ್ನೂ ಇದಕ್ಕೆ ಸೇರಿಸುತ್ತಿದ್ದೇವೆ.

ಈ ಮಸೂದೆಯಲ್ಲಿ ಅಂಥಾದ್ದೇನೂ ಗಹನವಾದ ವಿಚಾರಗಳಿಲ್ಲ. ಕೆಲವು ಮಾನ್ಯ ಸದಸ್ಯರು ವರಮಾನ ತೆರಿಗೆ ಕುರಿತಾಗಿ ಮಾತನಾಡಿದರು. ವರಮಾನ ತೆರಿಗೆ ಕುರಿತು ಆಯವ್ಯಯ ಕಾಲಕ್ಕೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂಥಾ ಒಂದು ಸಣ್ಣ ಮಸೂದೆಯನ್ನು, ಮಂಡನೆ ಮಾಡಿದಾಗ, ಅದರ ಬಗ್ಗೆ ಪ್ರಸ್ತಾಪಿಸುವುದು ಸಮಂಜಸವಲ್ಲ ಎನ್ನುವುದು ನನ್ನ ಅಭಿಪ್ರಾಯ.

MR. DEPUTY SPEAKER.—I will put the motion to the vote of the House. The question is :

"That the Karnataka Sales Tax (Amendment) Bill, 1976 be taken in to consideration."

*The motion was adopted.*

Clauses 2 to 10

MR. DEPUTY SPEAKER.—I shall put Clause 2 to 10 both inclusive to the vote of the House. The question is :

"That Clauses 2 to 10 both inclusive, do stand part of the Bill"

*The motion was adopted*

Clauses 2 to 10 both inclusive, were added to the Bill.

Clause 1 etc.

MR DEPUTY SPEAKER.—The question is :

"That Clause 1, the long Title, the Preamble and Enacting formula do stand part of the Bill."

*The motion was adopted.*

Clause 1, the long Title the Preamble and the Enacting formula were added to the Bill.

MOTION TO PASS

SRI M. Y. GHORPADE.—I move ;

"That the Karnataka Sales Tax (Amendment) Bill, 1976, be passed."

MR. DEPUTY SPEAKER.—Motion moved. The question is :

"That the Karnataka Sales Tax (Amendment) Bill, 1976, be passed."

*The motion was adopted and the Bill was passed*